15-5-90ರಂದು ಕೋರಲಾಗಿತ್ತು. ಈ ಪೈಕಿ ಅರಕ್ಷಕ ಮಹಾ ನಿರ್ದೇಶಕರಿಂದ ಮತ್ತು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಮೇಲಿನ 5 ಅಭ್ಯರ್ಥಿಗಳ ಬಗ್ಗೆ ವರದಿಗಳು ಬಂದಿದೆ. ಆದರೆ, ವೈದ್ಯಕೀಯ ಪರೀಕ್ಷೆಯ ಬಗ್ಗೆ 3 ಅಭ್ಯರ್ಥಿಗಳ ಬಗ್ಗೆ ಮಾತ್ರ ವರಿದಿ ಬಂದಿದ್ದು ಇನ್ನುಳಿದ ಎರಡು ಅಭ್ಯರ್ಥಿಗಳು ಅಂದರೆ ಶ್ರೀಮತಿ ಆರ್. ಸರಸ್ವತಿ ಮತ್ತು ಶ್ರೀ ತಾಂಡವ ಮೂರ್ತಿ ಅವರುಗಳ ಬಗ್ಗೆ ವೈದ್ಯಕೀಯ ವರದಿ ಬರಬೇಕಾಗಿದ್ದು. ಇವರುಗಳ ಪೈಕಿ ದಿನಾಂಕ 24-3-91 ರಂದು ಶ್ರೀ ತಾಂಡವ ಮೂರ್ತಿ ಅವರ ಬಗ್ಗೆ ಮಾತ್ರ ವರದಿ ಬಂದಿದೆ. ಶ್ರೀಮತಿ ಸರಸ್ವತಿ ಅವರ ಬಗ್ಗೆ ಇನ್ನೂ ವರದಿ ಬಂದಿರುವುದಿಲ್ಲ.

ಶ್ರೀಮತಿ ಸರಸ್ವತಿ ಅವರು ಆಯ್ಕೆ ಪಟ್ಟಿಯಲ್ಲಿ ಕ್ರಮ ಸಂಖ್ಯೆ 2 ರಲ್ಲಿ ಇರುವುದರಿಂದ ಅವರನ್ನು ಬಿಟ್ಟು ಬೇರೆಯವರಿಗೆ ನೇಮಕಾತಿ ನೀಡಲು ಬರುವುದಿಲ್ಲ, ಆದ ಕಾರಣ ಅವರ ಬಗ್ಗೆ ವೈದ್ಯಕೀಯ ವರಿದಿಯನ್ನು ಕೂಡಲೇ ಕಳುಹಿಸಿ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಅವರಿಂದ ವರದಿ ಬಂದ ಕೂಡಲೇ ಮೇಲಿನ ಅಭ್ಯರ್ಥಿಗಳಿಗೆ ನೇಮಕಾತಿಯನ್ನು ನೀಡಲಾಗುವುದು.

ರೈತರ ಸಮಸ್ಯೆಗಳ ಬಗ್ಗೆ ಮುಖ್ಯಮಂತ್ರಿಗಳ ಹೇಳಿಕೆ.

+ ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಸಭಾಧ್ಯಕ್ಷರೇ, ನಾನು, ಮೊನ್ನೆ ಉತ್ತರ ಕೊಡತಕ್ಕಂಥ ಕಾಲದಲ್ಲಿ ರೈತರ ಸಮಸ್ಯೆಗಳ ಬಗ್ಗೆ ಪ್ರತ್ಯೇಕವಾದ ಹೇಳಿಕೆಯನ್ನು ಕೊಡುತ್ತೇನೆ ಎಂಬ ಮಾತನ್ನು ತಮ್ಮ ಮುಖಾಂತರ ಈಸದನಕ್ಕೆ ತಿಳಿಸಿದ್ದೆ. ಅದರ ಪ್ರಕಾರ ಈ ನನ್ನ ಹೇಳಿಕೆಯನ್ನು ಈ ಸದನದಲ್ಲಿ ಮತ್ತು ಇಲ್ಲಿ ಆದಮೇಲೆ ಅ ಸದನದಲ್ಲಿ ಕೂಡಾ ಹೋಗಿ ಕೊಡುತ್ತೇನೆ. ಇಲ್ಲಿ ನಾವು ತೆಗೆದು ಕೊಂಡಿರತಕ್ಕಂಥ ತೀರ್ಮಾನಗಳು ಸರಕಾರದಲ್ಲಿ ಇರತಕ್ಕಂಥ ಕಾನೂನಿನ ಚೌಕಟ್ಟಿನಲ್ಲಿ ನಾವು ಶಕ್ತಿ ಮೀರಿ ಇದರ ಬಗ್ಗೆ ಕೆಲವು ತೀರ್ಮಾನಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಕೆಲವು ಕಾನೂನು ತೊಡಕುಗಳು ಮತ್ತೊಂದು ಇರುವುದರಿಂದ ಇನ್ನು ಕೆಲವು ನಮ್ಮ ವ್ಯಾಪ್ತಿಗೆ ಬರುವುದಿಲ್ಲ, ಕೇಂದ್ರ ಸರಕಾರದ ವ್ಯಾಪ್ತಿಗೆ ಬರುವ ವಿಚಾರ ಆಗಿರುವುದರಿಂದ, ಇನ್ನು ಕೆಲವು ಸಂವಿಧಾನಕ್ಕೆ ತಿದ್ದುಪಡಿ ಮಾಡತಕ್ಕಂಥ ವಿಚಾರ ಇರುವುದರಿಂದ ಇಲ್ಲಿ ಮಾಡುವುದಕ್ಕೆ ಬರುವುದಿಲ್ಲ ಎಂಬ ಮಾತನ್ನು ಈ ಸಂದರ್ಭದಲ್ಲಿ ಪೂರ್ವಪೀಠಿಕೆಯಾಗಿ ಹೇಳಿ, ನಾವು ತೆಗೆದುಕೊಂಡಿರತಕ್ಕಂಥ ಕೆಲವು ತೀರ್ಮಾನವನ್ನು ತಮ್ಮ ಮುಖಾಂತರ ಇಡುತ್ತಿದ್ದೇನೆ. ಈ ಸಂದರ್ಭದಲ್ಲಿ ಇದರ ಬಗ್ಗೆ ಅನೇಕ ಜನ ಮಾನ್ಯ ಮಿತ್ರರು ಪ್ರಸ್ತಾಪ ಮಾಡಿರುತ್ತಾರೆ. ವಿರೋಧಪಕ್ಷದ ನಾಯಕರು, ಬಿ.ಜೆ.ಪಿ. ಮಿತ್ರರು, ರೈತ ಸಂಘದ ಮಿತ್ರರು, ನಮ್ಮ ಪಕ್ಷದ ವತಿಯಿಂದ ಮತ್ತು ಸದನದಲ್ಲಿ ಕೂಡಾ ಎಲ್ಲಾ ಪಕ್ಷದ ವತಿಯಿಂದ ಎಲ್ಲರೂ ಸೇರಿ ಇದರ ಬಗ್ಗೆ ವ್ಯಾಖ್ಯಾನ ಮಾಡಿರುತ್ತಾರೆ. ನಮ್ಮೆಲ್ಲರ ಅಸಕ್ತ ಇರತಕ್ಕಂಥಾದ್ದು ರೈತರ ಸಮಸ್ಯಗಳ ಪರಿಹಾರದ ಬಗ್ಗೆ. ಅದಕ್ಕೋಸ್ಕರವಾಗಿ ಹೆಚ್ಚಿನ ರೂಪದಲ್ಲಿ ಪರಿಹಾರ ಕೊಡಬೇಕೆಂಬ ಸದಿಚ್ಛೆ ಸರಕಾರದ ಅಸೆ, ಆ ದಿಸೆಯಲ್ಲಿ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ.

ಬಜೆಟ್ ಓದಿರತಕ್ಕಂಥವರಿಗೆ ಈಗಾಗಲೇ ಗೊತ್ತಾಗಿರಬೇಕು. ಈ ದಿಸೆಯಲ್ಲಿ ನಮ್ಮ ಚಿಂತನೆ ಅಯುವ್ಯಯ ಪತ್ರದ ಮುಖಾಂತರ ಸರಿದಿದೆ ಎನ್ನತಕ್ಕಂಥಾದ್ದು ನಾನೀಗ ಈ ಹೇಳಿಕೆಯನ್ನು ತಮ್ಮ ಮುಂದೆ ತಮ್ಮ ಅಪ್ಪಣೆ ಪಡೆದು ಇಡುತ್ತೇನೆ. ಕರ್ನಾಟಕ ರಾಜ್ಯದ ರೈತರ ಕಲ್ಯಾಣಕ್ಕಾಗಿ ಕೈಗೊಂಡ ನಮ್ಮ ಸರ್ಕಾರದ ನಿರ್ಧಾರಗಳು. ನಮ್ಮ ಕಾರ್ಯಕ್ರಮಗಳು ನಮ್ಮ ತೀರ್ಮಾನಗಳು ಈ ಕೆಳಕಂಡಂತೆ ಇವೆ. 1) ಕೃಷಿಗೆ ಸಂಬಂಧಿಸಿದಂತೆ ಬೆಲೆ ಮತ್ತು ಇತರ ಸಮಸ್ಯೆಗಳನ್ನು ಪರಿಹರಿಸಲು ಕೃಷಿ ರೀತಿಗಳ ಒಂದು ಸ್ಥಾಯಿ ಸಮಿತಿ ರಚನೆ ಮಾಡಲಾಗಿದೆ. ಈ ಸಮಿತಿಯಲ್ಲಿ ರೈತ ಪ್ರತಿನಿಧಿಗಳು

ಕೃಷಿ ತಜ್ಞರು ಸದಸ್ಯರನ್ನಾಗಿ ಸೇರಿಸಲಾಗಿದೆ. ಈ ಸಮಿತಿಯಲ್ಲಿ ಯಾರ್‍ಯಾರು ಇದ್ದಾರೆ ಎನ್ನತಕ್ಕಂಥಾದ್ದನ್ನು ನಾನು ಈ ಸಂದರ್ಭದಲ್ಲಿ ಪ್ರಕಟಣೆ ಮಾಡುತ್ತೇನೆ. ಸ್ಥಾಯಿ ಸಮಿತಿ ಸದಸ್ಯರು ಈ ರೀತಿ ಇದ್ದಾರೆ. ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಡಾಕ್ಟರ್ ಧ್ವಾರಕನಾಥ್ ಅವರು ಸದಸ್ಯರಾಗಿರುತ್ತಾರೆ. ಪ್ರೊ.ವಿ.ಹೆಚ್.ಖಾತರಕಿ, he is a scientist fron the Agriculture University, Dharwad.

ಇವರು ಹತ್ತಿ ಬಗ್ಗೆ ಒಳ್ಳೆಯ ತಜ್ಞರಿದ್ದಾರೆ. Then, Vice Chancellor of University of Agricultural Sciences, Bangalore, Vice Chancellor of the Agriculture University Dharwad.

ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು, ಡಾಕ್ಟರ್ ಪ್ರಬುಲ್ಲ ಚಂದ್ರ ಅವರು ತಮಗೆ ಗೊತ್ತಿರುವಹಾಗೆ ಅವರು ರಾಷ್ಟ್ರ ಪ್ರಶಸ್ತಿ ಕೂಡ ಪಡೆದುಕೊಂಡಿದ್ದಾರೆ. ಸೆಕ್ರೆಟರಿ ಅಗ್ರಿಕಲ್ಚರ್ ಅಂಡ್ ಆರ್ಟಿಕಲ್ಚರ್, ಡೈರೆಕ್ಟರ್ ಆಫ್ ಆರ್ಟಿಕಲ್ಚರ್ ಆ ಸದನದಿಂದ ಒಬ್ಬ ಸದಸ್ಯರು ಶ್ರೀ ಕೆ.ಎನ್.ನಾಗೇಗೌಡ ಎಂ ಎಲ್ ಸಿ ಅವರು ಮತ್ತೊಬ್ಬ ಶಾಸಕ ಮಿತ್ರರಾದ ಈ ಸದನಸದಸ್ಯರಾದ ಶ್ರೀಮಾನ್ ಎಂ.ಎಸ್.ಪಾಟೀಲ್‌ರವರು ಇದ್ದಾರೆ. ಈ ಸಮಿತಿಯ ಕನ್‌ವೀನರ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್. ಇನ್ನು ಎರಡನೇಯ ವಿಚಾರ ಕೃಷಿ ಸಾಲಕ್ಕಾಗಿ ಇಡೀ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕಂಥ ಸಹಕಾರಿ ಕಾಯ್ದೆ ಸೆಕ್ಷನ್ 101(ಸಿ) ಇದು ತಮಗೆಲ್ಲರಿಗೂ ಗೊತ್ತಿದೆ. ಬಾಕಿ ಇದ್ದಂತಹ ಸಂದರ್ಭದಲ್ಲಿ ಆಸ್ತಿ ಹರಾಜಿಗೆ ಬಂದಾಗ ಆ ಆಸ್ತಿಯನ್ನು ಜಿಲ್ಲಾಧಿಕಾರಿಗಳು ಹರಾಜಿನಲ್ಲಿ ಇಟ್ಟುಕೊಳ್ಳತಕ್ಕಂಥಾದ್ದು ಇತ್ತು ಅದಕ್ಕೆ ಬಹಳ ವಿರೋಧ ಬಂತು. ಈ ಒಂದು ವಿಚಾರದಲ್ಲಿ ತಮಗೆಲ್ಲಾ ಗೊತ್ತಿರುವುದರಿಂದ ನಾವು ಸೆಕ್ಷನ್ 101(ಸಿ) ಕೋ ಅಪರೇಟಿವ್ ಸೊಸೈಟಿ ಆಕ್ಟ್ ಅದನ್ನು ರದ್ದು ಮಾಡಬೇಕೆಂದು ತೀರ್ಮಾನ ಸರ್ಕಾರ ತೆಗೆದುಕೊಂಡಿದೆ. ಅದಕ್ಕೆ ಒಂದು ತಿದ್ದುಪಡಿ ಅಧಿನಿಯಮ ನಾವು ಈಗ ಸುಗ್ರೀವಾಜ್ಞೆ ಮುಖಾಂತರ ಅರ್ಜೆಂಟಾಗಿ ತಂದು ಜಾರಿಗೆ ಕೊಡಬೇಕಾಗಿದೆ ಅದು ಒಂದೇ ದಾರಿ ಇರುವುದು. ಎಕೆಂದರೆ ಇವತ್ತು ಅಧಿವೇಶನ ಮುಗಿಯುತ್ತಿದೆ. ಅದರ ಮುಖಾಂತರ ತರತಕ್ಕಂಥ ವಿಚಾರ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ: ಮಾನ್ಯ ಮುಖ್ಯಮಂತ್ರಿಗಳೇ ಅದು ಸೆಕ್ಷನ್ 101 ಕ್ಲಾಜ್ (ಸಿ) ಅಲ್ಲ ಅದು 101(ಸಿ) ಎಂದು.

ಶ್ರೀ ಎಸ್. ಬಂಗಾರಪ್ಪ: ಅಭಿನಂದನೆಗಳು. ಇನ್ನು ಮೂರನೇಯ ವಿಚಾರ ಕಂದಾಯ ಬಾಕಿ ಇದ್ದರೆ ಸರ್ಕಾರ ಆ ಬಾಕಿ ವಸೂಲಿ ಮಾಡುವಾಗ ಸರ್ಕಾರದ ಕ್ರಮದಲ್ಲಿ ಇಡೀ ಜಮೀನನ್ನು ಮುಟ್ಟುಗೋಲು ಹಾಕಿಕೊಳ್ಳತಕ್ಕಂಥಾದ್ದು ಅಥವಾ ಪದ ತರತಕ್ಕಂಥ ಪರಿಸ್ಥಿತಿ ಈಗ ಇದೆ. ಅದಕ್ಕೆ ಸಂಬಂಧಪಟ್ಟ ಸೆಕ್ಷನ್ಸ್ ಲ್ಯಾಂಡ್ ರೆವಿನ್ಯೂ ಆಕ್ಟ್ ಅದಕ್ಕೆ ಸಂಬಂಧಪಟ್ಟಂತೆ ಸೆಕ್ಷನ್ 87,88,161,163,197 ಇವೆಲ್ಲವೂ ಕೂಡ ಸಂಬಂಧಪಟ್ಟಿರತಕ್ಕಂಥ ವಿಚಾರ. ಈಗ ಅದನ್ನು ಷರತ್ತಿಗೆ ಒಳಪಡಿಸಿ ನಾವು ಈ ಮುಟ್ಟುಗೋಲು ಹಾಕಿಕೊಳ್ಳತಕ್ಕಂಥಾದ್ದು ಎನಿದೆ ಸರ್ಕಾರದ ಪರ ಎಂದು ಬರತಕ್ಕಂಥ ಪದ್ದತಿಯನ್ನು ತೆಗೆದು ಹಾಕಿದ್ದೇವೆ. ಅಂದರೆ 10 ಸಾವಿರ ರೂಪಾಯಿಗಳಿಗೆ ಒಳಗೆ ಬಾಕಿ ಇದ್ದರೆ ಅದನ್ನು ಸರ್ಕಾರಿ ಪದ ಎಂದು ನಾವು ಮಾಡುವುದಿಲ್ಲ. ಅದಕ್ಕಿಂತ ಮೇಲೆ ಇದ್ದರೆ ಈ ಪದ್ಧತಿ ಮುಂದುವರಿಯುತ್ತದೆ ಎನ್ನತಕ್ಕಂಥ ನಿರ್ಧಾರವನ್ನು ನಾನು ಪ್ರಕಟಣೆ ಮಾಡುತ್ತೇನೆ.

10 ಸಾವಿರ ರೂಪಾಯಿ ಒಳಗಡೆ ಬಾಕಿ ಇದೆ ಅದನ್ನು ಸರ್ಕಾರಿ ಪದ ಎಂದು ನಾವು ಮಾಡುವುದಿಲ್ಲ, ಅದರ ಮೇಲಿದ್ದಾಗ ಈಗಿರತಕ್ಕಂಥ ಪದ್ದತಿಯೇ ಮುಂದುವರಿಯುತ್ತದೆ ಎನ್ನುವ ನಿರ್ಧಾರವನ್ನು ಪ್ರಕಟ ಮಾಡುತ್ತಿದ್ದೇವೆ. ವಸೂಲಿಗಾಗಿ ಜಪ್ತಿ ಮತ್ತು ಸ್ಥಿರಾಸ್ತಿ

ಹರಾಜು ಮುಂದುವರಿಸಿ, ಎಂದರೆ 10 ಸಾವಿರ ರೂಪಾಯಿ ಮೇಲ್ಪಟ್ಟಿದೆ, ಈ ಕಾನೂನು ತಿದ್ದುಪಡಿ ಮಾಡತಕ್ಕ ತೀರ್ಮಾನ ಮಾಡಿದ್ದೇವೆ. ಇದರ ಬಗ್ಗೆ ನಾವು ಅಜ್ಞೆಯನ್ನೂ ಹೊರಡಿಸುತ್ತೇವೆ. 4ನೇ ವಿಚಾರ, ಪದ ತಂದ ಜಮೀನುಗಳನ್ನು ಸಾಗುವಳಿ ಮಾಡುತ್ತಿರುವ ಭೂ ಹಿಡುವಳಿದಾರರಿಗೆ ಭೂ ಕಂದಾಯ ವಸೂಲಿ ಮಾಡಿ ಖಾಯಂಗೊಳಿಸಲಾಗುವುದು ಮತ್ತು ಪದವನ್ನು ರದ್ದುಗೊಳಿಸಲಾಗುವುದು. It is one of your demands also. ಇದನ್ನು ಕೂಡಾ ನಾವು ರದ್ದು ಮಾಡುತ್ತೇವೆ. ಸರ್ಕಾರಿ ಪದ ಎನ್ನತಕ್ಕಂಥಾದ್ದನ್ನು ನಾವು ತೆಗೆದುಹಾಕುತ್ತೇವೆ. 5ನೇ ವಿಚಾರ, ಭೂ ಸುಧಾರಣಾ ಕಾನೂನಿನ ಅನ್ವಯ, ಯಾವುದೇ ರೀತಿಯ ಗೇಣಿದಾರರಿಲ್ಲದೆ ಮೂಲ ಹಿಡುವಳಿದಾರನಿಗೆ ಜಮೀನುಗಳಿಗೆ ಸಂಬಂಧಪಟ್ಟಂತೆ ಹಕ್ಕು ದಾಖಲೆಗಳನ್ನು ಸರ್ಕಾರಿ ಜಮೀನುಗಳೆಂದು ದಾಖಲು ಮಾಡಿದ ಬಗ್ಗೆ ಸರ್ಕಾರದ ಮುಂದೆ ಮನವಿಗಳು ಬಂದಿವೆ. ಇದರ ಅರ್ಥ? ಕರ್ನಾಟಕ ಭೂ-ಸುಧಾರಣಾ ನಿಯಮದ ಪ್ರಕಾರ ಗೇಣಿದಾರರು ಇರುವುದೇ ಇಲ್ಲ. ಅದು ಇದೆ ಎನ್ನತಕ್ಕಂಥ ವಿಚಾರ, ಗೌರ್ನಮೆಂಟಿಗೆ ವೆಸ್ಟ್ ಅದರೆ ತಾನೇ ಮುಂದಿನ ವಿಚಾರ ಬರತಕ್ಕಂಥಾದ್ದು? ಇಲ್ಲಿ ವೆಸ್ಟ್ ಆಗಿದೆ ಅಂದ ತಕ್ಷಣ ಸರ್ಕಾರಿ ಜಮೀನು ಎಂದು ಬರೆದುಬಿಡುತ್ತಾರೆ. ಅದು ಹೋಗಬೇಕು. ಅರ್ಜಿದಾರರಿಲ್ಲ, ಗೇಣಿದಾರರಿಲ್ಲ. ಅದು ಯಾವುದೋ ಒಂದು ದಾಖಲೆ ಇದೆ ಎನ್ನುವ ಕಾರಣದಿಂದ ನಾವು ಮಾಡುವುದಕ್ಕೆ ಹೋಗಬಾರದೆಂದು ತಮ್ಮ ಬೇಡಿಕೆ ಕೂಡಾ ಅದಾಗಿತ್ತು. ಆ ದೃಷ್ಟಿಯಿಂದ ಈ ವಿಚಾರವನ್ನು ನಮ್ಮ ಪಕ್ಷದ ಸಭೆಯಲ್ಲೂ ಸಾಕಷ್ಟು ಪ್ರಮಾಣದಲ್ಲಿ ಚರ್ಚೆಗೆ ಬಂದಿತ್ತು. ಅದಕ್ಕೆ ಸಂಬಂಧಪಟ್ಟಂತೆ ಭೂ ಸುಧಾರಣ ಕಾನೂನು ಉಲ್ಲಂಘನೆಯಲ್ಲದ ಪ್ರಕರಣಗಳಲ್ಲಿ, ಅದರೆ, ಅದು ಟೆನೆನ್ಸಿ ಹೋಲ್ಡಿಂಗ್ ಎಂದು ಇದ್ದಾಗ ಅದು ವೆಸ್ಟ್ ಆಗಲೇಬೇಕಾಗುತ್ತದೆ. ಹಾಗಿಲ್ಲದೆ ಇರತಕ್ಕಂಥ ಪ್ರಕರಣಗಳಲ್ಲಿ ಮಾತ್ರ ಈ ಒಂದು ಸೌಲಭ್ಯವನ್ನು ಕೊಡುತ್ತೇವೆ. ಭೂ ಸುಧಾರಣ ಕಾನೂನಿನ ಉಲ್ಲಂಘನೆಯಲ್ಲದ ಪ್ರಕರಣಗಳಲ್ಲಿ ಹಕ್ಕುದಾರರಾಗಿ ಬರೆದ ಪದಗಳನ್ನು ತೆಗೆದು ಹಾಕಲು ಸುತ್ತೋಲೆಗಳನ್ನು ಕಳುಹಿಸಲಾಗುವುದು. I think your question is answered. 6ನೇ ವಿಚಾರ, ಸಾಲ ರದ್ದಿನ ಯೋಜನೆಯಲ್ಲಿ ಪ್ರಚಲಿತ ಅಣೆವಾರು ಷರತ್ತುಗಳು ಕ್ಲಿಷ್ಟವಾದುದರಿಂದ ಈ ನಿಯಮಗಳನ್ನು ಸರಳಗೊಳಿಸಿ ಅಯಾ ವರ್ಷದಲ್ಲಿ ಬರುವ ಮಳೆಯ ಪ್ರಮಾಣವನ್ನು ಆಧರಿಸಿ ಅಣೆವಾರಿ ನಿಗದಿಪಡಿಸುವ ನಿಯಮಗಳನ್ನು ರೂಪಿಸಲಾಗುವುದು. ಏಕೆಂದರೆ ಕ್ರಾಪ್ ಕಟಿಂಗ್ ಎಕ್ಸ್‌ಪರ್‌ಮೆಂಟ್ ಮತ್ತೊಂದು ಮಾಡಿ ರೈತರಿಗೆ ತೊಂದರೆ ಆಗುತ್ತದೆ ಅನ್ನತಕ್ಕಂಥ ವಿಚಾರ. ಅದಲ ಬಗ್ಗೆ ವಿವರಗಳನ್ನು ಮತ್ತೊಂದು ಪ್ಯಾರಾದಲ್ಲಿ ಓದುತ್ತೇನೆ. ಮತ್ತೊಂದು ವಿಷಯ 7ನೆಯದು, ಅರಣ್ಯ ಇಲಾಖೆಯಿಂದ ಕಂದಾಯ ಇಲಾಖೆಗೆ ವಾಪಸ್ ವಹಿಸಿಕೊಂಡ ಸಿ ಮತ್ತು ಡಿ ವರ್ಗದ ಜಮೀನುಗಳಲ್ಲಿ, ಇದರ ಬಗ್ಗೆ ತಾವೂ ಕೂಡ ಭಾಷಣ ಮಾಡಿದ್ದೀರಿ. ಅನೇಕ ಜನ ಮಿತ್ರರು ಕೂಡ ಹೇಳಿದ್ದಾರೆ, ಈ ಕಡೆಯಿಂದಲೂ ಹೇಳಿದ್ದಾರೆ. ಈ ಜಮೀನುಗಳಲ್ಲಿ ಕೃಷಿ ಕಾರ್ಮಿಕರು ಮಾಡಿರುವ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲಾಗುವುದು. ಏಕೆಂದರೆ, ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ನಾವು ತೆಗೆದು ಕೊಂಡುಬಿಟ್ಟಿದ್ದೇವೆ. ಈ ಬಗ್ಗೆ ಭೂ ಕಂದಾಯ ಅಧಿನಿಯಮದ ತಿದ್ದುಪಡಿಯನ್ನು ಜಾರಿಗೊಳಿಸಲಾಗುವುದು. 8ನೇ ವಿಷಯ, ಕೃಷಿ ಕಾರ್ಮಿಕರಿಗೆ ವಸತಿ ನಿವೇಶನ ಮಂಜೂರು ಮಾಡಲು ಕ್ರಮ ಕೈಗೊಳ್ಳುವುದಲ್ಲದೆ ಪ್ರತಿ ತಾಲ್ಲೂಕಿನಲ್ಲೂ 'ಆಶ್ರಯ' ಯೋಜನೆಯಂತೆ ಮನೆ ಕಟ್ಟಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಪರ್ ಇಯರ್ ಪರ್ ತಾಲ್ಲೂಕು ಒಂದು ಸಾವಿರ ಮನೆಗಳನ್ನು ಏನು ಹೇಳಿದ್ದೇವೆ ಅದರ ಅಡಿಯಲ್ಲೇ ಇದು ಬರುತ್ತದೆ. ಏಕೆಂದರೆ, ಆ ಬೇಡಿಕೆಯಲ್ಲಿ ಅದೂ ಒಂದಾಗಿದೆ. ಭಾಷಣದ ಬೇಡಿಕೆಗಳ ಒಂದು ಪಟ್ಟಿಯಲ್ಲೂ ಅದೆಲ್ಲಾ ಇದೆ. ಅದಕ್ಕೋಸ್ಕರ ಆಶ್ರಯ ಯೋಜನೆಯಲ್ಲಿ ಮನೆಗಳನ್ನು ಕೊಡತಕ್ಕಂಥ ಕಾರ್ಯಕ್ರಮಗಳನ್ನು ನಾವು ಹಾಕುತ್ತೇವೆ.

9ನೇಯ ವಿಚಾರ ಸರ್ಕಾರಿ ಜಮೀನುಗಳ ರಕ್ಷಣೆ ಮತ್ತು ವ್ಯವಹರಣೆ ಮತ್ತು ಮೋಜಣಿ ಬಗ್ಗೆ ಇದೇನಾಗಿದೆ? ಇದರ ಬಗ್ಗೆ ವಿರೋಧ ಪಕ್ಷದ ನಾಯಕರು ಹೇಳಿದ್ದಾರೆ. ಹಳೆಯ ಕಾಲದಲ್ಲಿ ಸರ್ವೇ ಸೆಟ್ಲ್‌ಮೆಂಟ್ ಅಗಿರುವುದು, ಇದರಿಂದ ಇಡೀ ಕರ್ನಾಟಕ ರಾಜ್ಯದಲ್ಲಿ ವಿಪರೀತ ವ್ಯತ್ಯಾಸಗಳಾಗಿವೆ. ಇದರಿಂದ ಹಲವಾರು ಜಗಳಗಳಾಗಿ ಸಿವಿಲ್ ಕೋರ್ಟ್‌ಗಳ ಮೆಟ್ಟಲು ಹತ್ತಿದ್ದಾರೆ. ಒಂದೇ ಜಮೀನ್ ಬಗ್ಗೆ ಮತ್ತೊಂದು ದಾಖಲೆ ಸೃಷ್ಟಿಯಾಗಿವೆ. ಅದು ಬಹಳ ಹೊಲಸು ಎದ್ದು ಹೋಗಿದೆ ಎಂಬ ಭಾವನೆ ಪದೇ ಪದೇ ಬಂದಿದೆ. ಅದಕ್ಕಾಗಿ ಹೊಸದಾಗಿ ಇಡೀ ಕರ್ನಾಟಕ ರಾಜ್ಯದಲ್ಲಿ, ಇದರ ಬಗ್ಗೆ ರೈತರು ಸಹಕಾರ ಕೊಡಬೇಕಾಗುತ್ತದೆ. ಒಂದು ಎಕರೆಗೆ ಎಷ್ಟು ಹಣ ಎಂದು ಕೊಡಬೇಕಾಗುತ್ತದೆ. ಹೆಚ್ಚು ಏನೂ ಹಾಕುವುದಿಲ್ಲ. ಬಹಳ ನಾಮಿನಲ್ ಆಗಿ ನಾವು ಫಿಕ್ಸ್ ಮಾಡುತ್ತೇವೆ. ಏಕೆಂದರೆ ನಾವು ಮ್ಯಾಸೀವ್ ಸ್ಕೇಲ್‌ನಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಸರ್ಕಾರಿ ಜಮೀನುಗಳ ರಕ್ಷಣೆ ಮತ್ತು ವ್ಯವಹರಣೆ ಮತ್ತು ಮೋಜಣಿಗಳ ಬಗ್ಗೆ ಮತ್ತು ಹಿಡುವಳಿದಾರರ ಹಕ್ಕು ದಾಖಲೆ ಬಗ್ಗೆ ನಿಯಮಗಳನ್ನು ಸರಳಗೊಳಿಸಿ ರೈತರ ಒಪ್ಪಿಗೆ ರೀತಿಯ ಮೋಜಣಿ ಮಾಡಲು ವ್ಯವಸ್ಥೆಯನ್ನು ಏರ್ಪಡಿಸಿ ಕಂದಾಯ ಅಧಿಕಾರಿ ಮತ್ತು ಮೋಜಣಿ ಅಧಿಕಾರಿಗಳಿಂದ ಇರುವ ಕಿರುಕುಳವನ್ನು ತಪ್ಪಿಸಲಾಗುವುದು ಮತ್ತು ಹೊಸದಾಗಿ ಮೋಜಣಿಯನ್ನು ಕರ್ನಾಟಕ ರಾಜ್ಯಾದ್ಯಂತ ಮಾಡಲಾಗುವುದು.

10ನೇ ವಿಚಾರ. ಮಧ್ಯಮ ಮತ್ತು ದೊಡ್ಡ ದೊಡ್ಡ ಪ್ರಮಾಣದ ನೀರಾವರಿ ಯೋಜನೆಗಳ ನೀರಿನಿಂದ ಬೆಳೆದ ಬೆಳೆಗಳ ಬಾಬ್ತು. ನೀರು ದರವನ್ನು ವೈಜ್ಞಾನಿಕವಾಗಿ ನಿಗದಿ ಪಡಿಸಿ ಕ್ರಮ ಬದ್ಧವಾದ ವಸೂಲಿ ಕ್ರಮ ಕೈಗೊಳ್ಳಲಾಗುವುದು. ಏಕೆಂದರೆ ಈಗ ಇರತಕ್ಕ ರೇಟಿನ ಬಗ್ಗೆ ಎಲ್ಲರೂ ಭಾಷಣಮಾಡಿದ್ದೀರಿ. ತಾವು ಸಹ ಬೇಡಿಕೆಯನ್ನು ಇಟ್ಟಿದ್ದೀರಿ. ಪ್ರೊಫೆಸರ್ ನಂಜುಂಡಸ್ವಾಮಿಯವರು ಹಾಗೂ ಇತರರು ಕೂಡ ಬೇಡಿಕೆಯನ್ನು ಇಟ್ಟಿದ್ದಾರೆ. ಅವೈಜ್ಞಾನಿಕವಾಗಿ ಇದೆ, ಸರಿಯಾಗಿ ಇಲ್ಲ ಎನ್ನತಕ್ಕ ವಿಚಾರ. ಇದರ ಬಗ್ಗೆ ವೈಜ್ಞಾನಿಕವಾಗಿ ಹೇಗೆ ಹೋಗಬೇಕು ಎನ್ನುವುದರ ಬಗ್ಗೆ ನಾವು ಚರ್ಚೆ ಮಾಡಿ ತೀರ್ಮಾನ ಮಾಡೋಣ. The government is ready to have your suggestions and take a final decision and then introduce a system based on scientific approach. ಅದರ ಮೇಲೆ ಮಾಡೋಣ. 11ನೇ ವಿಚಾರ. ಮಧ್ಯಮ ಮತ್ತು ದೊಡ್ಡ ನೀರಾವರಿ ಯೋಜನೆಗಳ ಅಚ್ಚುಕಟ್ಟು ಪ್ರದೇಶದಲ್ಲಿ ನಿಗಧಿತ ಬೆಳೆ ಬೆಳೆಯುವ ಬಗ್ಗೆ ಅದೇಶ ನೀಡಲು ಅನುಕೂಲ ಆಗುವಂತೆ ರೈತರ ಪ್ರತಿನಿಧಿಗಳನ್ನೊಳಗೊಂಡ ಸಲಹಾ ಸಮಿತಿಯನ್ನು ರಚಿಸಲಾಗುವುದು. ಆ ಸಮಿತಿಯನ್ನು ಈಗ ನಾನು ಪ್ರಕಟ ಮಾಡುತ್ತಿಲ್ಲ. ಅನಂತರ ಪ್ರಕಟಿಸುತ್ತೇನೆ. ನೀರಾವರಿ ಬಗ್ಗೆ ಏನು ಆಗಿದೆ ಎಂಬುದನ್ನು ನೋಡಬೇಕು. ಬ್ಲಾಕ್ ಕಾಟನ್ ಸಾಯಿಲ್, ಮತ್ತೊಂದು ವಿಚಾರ, ಅದು ನೀರು ಉಂಡು ಬಿಟ್ಟಿದ್ದಾವೆ ಇತ್ಯಾದಿಯಾಗಿರತಕ್ಕ ಕಂಪ್ಲೆಂಟ್ಸ್ ಬರುತ್ತಿದೆ. ಎಲ್ಲಾ ಕಡೆಯಿಂದ ಬರುತ್ತಿದೆ. ಇದರ ಬಗ್ಗೆ ನಾವು ನಿಗದಿತ ಬೆಳೆ ಬೆಳೆಸುವುದಕ್ಕೋಸ್ಕರ ವಿಚಾರ ಮಾಡಬೇಕು. ಏಕೆಂದರೆ ಕಂಡ ಕಂಡ ಬೆಳೆಗೆ ಹಾಕಿಬಿಡುತ್ತಾರೆ. ಅದು ಬರುವುದಿಲ್ಲ ಎಂದು ಯಾವುದೋ ಒಂದು ರೇಟ್ ಸಿಕ್ಕ ತಕ್ಷಣ ತೆಗೆದುಕೊಂಡು ಹೋಗಿ ಹಾಕುವುದು. ಅದು ಹಾಗೆ ಆಗಬಾರದು. ಅದು ಕೂಡ ವೈಜ್ಞಾನಿಕವಾಗಿ ಇರಲಿ. ಅದಕ್ಕೆ ಒಂದು ಸಮಿತಿ ಬಗ್ಗೆ ತಮ್ಮ ಬೇಡಿಕೆ ಇದೆ. ಅದರ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುತ್ತೇವೆ. 12ನೆಯ ವಿಚಾರ. ಕಳೆದ ನಾಲ್ಕು ತಿಂಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಈಗಾಗಲೇ ಸುಮಾರು 43,670 ನೀರಾವರಿ ಪಂಪುಸೆಟ್ಟಿಗೆ ವಿದ್ಯುತ್ತನ್ನು ಒದಗಿಸಿದೆ. ಈ ವರ್ಷದಲ್ಲಿ ಮಾರ್ಚ್ ಒಳಗೆ 60 ಸಾವಿರ ಪಂಪುಸೆಟ್ಟಿಗೆ ವಿದ್ಯುತ್ತನ್ನು ಒದಗಿಸಬೇಕೆಂಬ ಗುರಿ

ಮುಟ್ಟಿದೆ, ಇಷ್ಟರಲ್ಲಿ 65 ಸಾವಿರ ಪಂಪುಸೆಟ್ಟಿಗೆ ವಿದ್ಯುತ್ ಒದಗಿಸುವುದು ಸಂತೋಷದ ಸಂಗತಿ. ಇದು ಒಂದು ರಾಷ್ಟ್ರೀಯ ದಾಖಲೆ ಕೂಡ ಆಗಿದೆ. ಫಸ್ಟ್ ಟೈಮ್ ಇದು. ಏಕೆಂದರೆ ತಮಗೆ ಗೊತ್ತಿದೆ, ನಾನು ಹೇಳಿದ್ದೇನೆ. The yearly target upto the end of this month was 40,000 i,e.energisation of the new pumpset.

ಅದನ್ನು ನಾವು 60,000ಕ್ಕೆ ಏರಿಸಿದ್ದೇವೆ. ಈಗ ಅದು 65 ಸಾವಿರ ತೆಗೆದುಕೊಂಡು ನಾವು ಮುಟ್ಟುತ್ತಿದ್ದೇವೆ. ಬಹಳ ಸ್ಪೀಡ್ ಅಪ್ ಮಾಡಿ. ವರ್ಕನ್ನು ತೆಗೆದುಕೊಂಡು ಹೋಗಿದ್ದೇವೆ. ನಿಮ್ಮ ಬೇಡಿಕೆ ಕೂಡ ಅದೇ ಆಗಿದೆ. ಮೂರು ಕಂಬದವರೆಗೆ ಇದ್ದು ಅದನ್ನು ಜಾಸ್ತಿ ಮಾಬೇಕು ಎಂದು ತಾವು ಒತ್ತಾಯ ಮಾಡಿದ್ದೀರಿ. ಕೆ.ಇ.ಬಿ.ಯಲ್ಲಿ ಬೋರ್ಡ್ ಡಿಸಿಷನ್ ತೆಗೆದುಕೊಂಡು ಐದು ಷೇಲ್ಸ್‌ವರೆಗೆ ತೆಗೆದುಕೊಂಡು ಹೋಗಿದ್ದು ಆಗಿದೆ. ಆದರೂ ಕೂಡ ಇನ್ನೂ ಸ್ವಲ್ಪ ಕಂಪ್ಲೈಂಟ್ಸ್ ಇದೆ ಇಲ್ಲ ಎನ್ನತಕ್ಕ ಮಾತನ್ನು ನಾನು ಅಡಲಾರೆ. ಅದು ಎಲ್ಲೆಲ್ಲಿ ಬಂದಿದೆ. ಅದನ್ನು ನೋಡಿ ಸರಿಪಡಿಸುವುದಕ್ಕೆ ಅದರ ಬಗ್ಗೆ ವ್ಯಾಪಕವಾದ ಕ್ರಮ ತೆಗೆದುಕೊಂಡಿದ್ದೇವೆ. ಮಾನ್ಯ ಬೈರೇಗೌಡರು ಸಂತೋಷಪಟ್ಟು ಇಲ್ಲಿ ಹೊಗಳಿದ್ದಾರೆ. ಸದನದಲ್ಲಿ ಕೂಡ ಬಹಳ ಒಳ್ಳೆಯ ಕಾರ್ಯಕ್ರಮವನ್ನು ಈಗ ನೀವು ಕೆ.ಇ.ಬಿ.ಯನ್ನು ಹಾಕುತ್ತಿದ್ದೀರಿ ಎನ್ನತಕ್ಕ ಮಾತನ್ನು ಕೂಡ ತಿಳಿಸಿದ್ದಾರೆ. ಮತ್ತೊಂದು ವಿಚಾರ ಗ್ರಾಮೀಣ ಪ್ರದೇಶದಲ್ಲಿ ಭಾಗ್ಯ ಜ್ಯೋತಿ ಯೋಜನೆ. ಏಕೆಂದರೆ ಕೃಷಿ ಕಾರ್ಮಿಕರಿಗೆ ಸಂಬಂಧಪಟ್ಟಿರತಕ್ಕ ವಿಚಾರ ಕೂಡ ಹೌದು. ಭಾಗ್ಯಜ್ಯೋತಿ ಕಾರ್ಯಕ್ರಮದ ಅನ್ವಯ ಒದಗಿಸುವ ವಿದ್ಯುತ್ತನ್ನು ಯಾವುದೇ ತಡೆ ಇಲ್ಲದೆ ನೀಡಲಾಗುವುದು. ಈಗ ಏನು ಆಗಿದೆ ಎಂದರೆ ಬಾಕಿ ಇರತಕ್ಕದ್ದು ಡಿಸ್‌ಕನೆಕ್ಟ್ ಮಾಡಿದ್ದೇವೆ ಎನ್ನತಕ್ಕ ಕಂಪ್ಲೈಂಟ್ ಕೂಡ ಬಜೆಟ್ ಭಾಷಣದಲ್ಲಿ ಬಂದವು. ಇಷ್ಟರಲ್ಲಿಯೇ ವಿದ್ಯುತ್ ಕಡಿತಗೊಳಿಸಿದ ಭಾಗ್ಯಜ್ಯೋತಿ ಮನೆಗಳಿಗೆ ವಿದ್ಯುತ್ ಒದಗಿಸುವುದಲ್ಲದೆ ಇನ್ನು ಮುಂದೆಯೂ ಕೂಡ ಕಡಿತಗೊಳಿಸುವ ಕ್ರಮವನ್ನು ಕೂಡ ರದ್ದು ಪಡಿಸಲಾಗುವುದು. ಅದನ್ನು ಮಾಡುತ್ತೇವೆ. ಅನಂತರ ಕನೆಕ್ಷನ್ ವಿಲ್ ಬಿ ರೆಸ್ಟೋರ್ಡ್. ನಾನು ಮತ್ತೊಂದು ಮಾತು ಹೇಳುತ್ತೇನೆ. ಎಲ್ಲೆಲ್ಲಿ ವಿದ್ಯುತ್ ಕಡಿತ ಮಾಡಿದ್ದೇವೆ, ಅದನ್ನು ರೆಸ್ಟೋರ್ ಮಾಡಿಯೇ ಕೊಡುತ್ತೇವೆ. ಮತ್ತೊಂದು ವಿಚಾರ. ರೈತರ ಮೇಲೆ ಇರತಕ್ಕ ಕೇಸುಗಳನ್ನು ವಿತ್‌ಡ್ರಾ ಮಾಡಬೇಕು ಎನ್ನುವ ಮಾತನ್ನು ತಾವು ಹೇಳಿದ್ದೀರಿ, ಇನ್ನೂ ಕೆಲವರು ಹೇಳಿದ್ದಾರೆ. ಮೊನ್ನೆ ತಾನೇ ಕೋಮು ಗಲಭೆಗಳಲ್ಲಿ ಅನ್ಯಾಯವಾಗಿ ಕೇಸುಗಳನ್ನು ಹಾಕಿದ್ದೀರಿ, ಆ ಕೇಸನ್ನು ವಿತ್‌ಡ್ರಾ ಮಾಡಬೇಕು ಎಂದು ಕೆಲವರು ಹೇಳಿದ್ದಾರೆ. ಇನ್ನು ಕೆಲವರು ತಮ್ಮ ಅಭಿಪ್ರಾಯವನ್ನು ಈ ಸದನದಲ್ಲಿ ಹೇಳಿದ್ದಾರೆ. ಇಲ್ಲೂ ಕೂಡ ಬಂದಿದೆ. ಯುವಕರ ಮೇಲೆ, ವಿದ್ಯಾರ್ಥಿಗಳ ಮೇಲೆ ಕೆಲವು ಕೇಸ್ ದಾಕಲಾಗಿದೆ. ಅದನ್ನು ತೆಗೆಯಬೇಕೆಂದು ಹೇಳಿದ್ದಾರೆ. ಅನಂತರ ಮೈನಾರಿಟೀಸ್ ಮೇಲೆ ಹಿಂದೆ ಡೆಕನ್ ಹೆರಾಲ್ಡ್‌ನಲ್ಲಿ ಏನೋ ಒಂದು ಆರ್ಟಿಕಲ್ ಬಂತು. ಪ್ರವಾದಿ ಮೊಹಮದ್ ಮೇಲೆ. ಅವರ ಮೇಲೆ ಕೇಸ್ ಹಾಕಿದ್ದಾರೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ, ಆ ಬೇಡಿಕೆ ಕೂಡ ಹೇಳಿದ್ದೀರಿ. ಈ ವಿಚಾರದ ಬಗ್ಗೆ ಯಾವ ಯಾವ ವಿಚಾರ ಎನ್ನತಕ್ಕದ್ದನ್ನು ಈಗ ತಮ್ಮ ಮುಂದೆ ತಿಳಿಸುತ್ತಿದ್ದೇವೆ. ಸರ್ಕಾರ ತೀರ್ಮಾನವೂ ಕೂಡ ಈಗಾಗಲೇ ಆಗಿದೆ. Number of innocent people have been involved in the undermentioned cases in the state i.e. Malavalli etc. The cases have been booked against them. This is the allegation made. Therefore, according to them,this has caused lot of inconvenience to them ಎನ್ನತಕ್ಕ ವಿಚಾರದಲ್ಲಿ ಹೇಳಿದರು.

Therefore the government has taken a decision to withdraw the cases and I am reading out the list of the cases pertaining to recent clashes from

September to October 1990. ಅಂಡರ್ ಕಮ್ಯೂನಲ್ ರೈಯಟ್ಸ್ ಏನು ನಡೆದವು, ಕೋಮು ಗಲಭೆಗಳ ಸಂಬಂಧಪಟ್ಟಿರತಕ್ಕಂಥ ಕೇಸುಗಳು, ಅದರಲ್ಲಿ ಯಾರೋ ಇನ್ನೊಸೆಂಟ್‌ಗಳ ಮೇಲೆ ಕೇಸುಗಳು ಬಿದ್ದಿದ್ದುವು, ಆ ಕೇಸುಗಳನ್ನೆಲ್ಲಾ ನಾವು ವಿತ್‌ಡ್ರಾ ಮಾಡುತ್ತಿದ್ದೇವೆ. ಆಗ ಇಂದಿರಾಗಾಂಧಿಯವರ ಸದಸ್ಯತ್ವದಿಂದ ತೆಗೆದು ಹಾಕಿದ ಕಾಲದಲ್ಲಿ ಗಲಾಟೆಗಳು ಆಗಿ ಇನ್ನೂ ಕೂಡ ಕೆಲವರು ಕೇಸ್‌ಗಾಗಿ ಕೋರ್ಟ್‌ಗೆ ಹೋಗುತ್ತಿದ್ದಾರೆ. ಆ ಕಾಲದಲ್ಲಿ ನಡೆದಿರತಕ್ಕಂಥ ಕೇಸ್‌ಗಳನ್ನು ಕೂಡ ನಾವು ಹಿಂದಕ್ಕೆ ತೆಗೆದುಕೊಳ್ಳುತ್ತಾ ಇದ್ದೇವೆ. ಅನಂತರ ಕರ್ನಾಟಕ ರಾಜ್ಯದಲ್ಲಿ ರೈತಸಂಘದ ಮಿತ್ರರು, ಚಳುವಳಿ ಮಾಡಿದರು. ನಿಜ ಚಳುವಳಿಯು ಒಂದು ಮಿತಿ ತಪ್ಪಿ ಹೋಗಬಾರದು ಎನ್ನತಕ್ಕಂಥ ಮಾತನ್ನು ನಾವೆಲ್ಲರೂ ಒಪ್ಪಿದ್ದೇವೆ, ನಾವೆಲ್ಲರೂ ಚಳುವಳಿಗಳನ್ನು ಮಾಡಿದವರೆ ಆಗಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಇವೊತ್ತು ರೈತರು ಬೆಳೆ ಬೆಳೆದು ನಮಗೆಲ್ಲಾ ಅನ್ನ ಕೊಡತಕ್ಕಂಥವರಾಗಿದ್ದಾರೆ. ಆ ಕೈಗಳಿಗೆ ಗೌರವ, ಶಕ್ತಿಯನ್ನು ಕೊಡಬೇಕಾಗುತ್ತದೆ ಅವರಿಗೆ ಅಡೆತಡೆ ತೊಂದರೆಗಳು ಆಗದಹಾಗೆ ನೋಡಿಕೊಳ್ಳಬೇಕಾಗುತ್ತದೆ. ಆ ಒಂದು ಜವಾಬ್ದಾರಿಯು ನಮ್ಮೆಲ್ಲರ ಮೇಲೆಯೂ ಇದೆ. ಸರಕಾರದ ಈ ವಿಚಾರಧಾರೆ ಮತ್ತು ನೀತಿಯನ್ನು ಕರ್ನಾಟಕ ರಾಜ್ಯದ ರೈತರುಗಳೆಲ್ಲರೂ ಅರ್ಥಮಾಡಿಕೊಳ್ಳುತ್ತಾರೆ, ರೈತರ ಮುಖಂಡರು, ಈ ಸದನದ ಸದಸ್ಯರಾದಿಯಾಗಿ ಸರಕಾರವನ್ನು ಅರ್ಥಮಾಡಿಕೊಳ್ಳತಕ್ಕಂಥಾದ್ದು ಇದೆ. ಈ ಸಂದರ್ಭದಲ್ಲಿ ನಾವು ಒಂದು ದೊಡ್ಡ ತೀರ್ಮಾನವನ್ನು ಮಾಡಿದ್ದೇವೆ. ರೈತಸಂಘದ ಚಳುವಳಿ ಏನು ನಡೆಯಿತು? ಆ ಸಂದರ್ಭದಲ್ಲಿ ಹಾಕಿರತಕ್ಕಂಥ ಕೇಸುಗಳು ಕರ್ನಾಟಕ ಯಾವುದೇ ಕೋರ್ಟ್‌ನಲ್ಲಿ ಇರಬಹುದು, ಅವೆಲ್ಲವನ್ನೂ ವಿತ್‌ಡ್ರಾ ಮಾಡುತ್ತಿದ್ದೇವೆ. ನಮ್ಮ ಬಾಬಾಗೌಡ ಪಾಟೀಲರ ಮೇಲೆಯೂ ಕೇಸ್ ಇದೆ Under sectoin 307. He is a responsible hon'ble member of this house.

ಅವರ ಮೇಲೆ ಮತ್ತು ಬೇರೆಯವರ ಮೇಲೆ ಕೇಸ್ ಹಾಕಿದ್ದರು. supposing, they are not the members of this august house.

ಅದು ಜವಾಬ್ದಾರಿ ಇದ್ದು ಒಂದು ಸದುದ್ದೇಶದಿಂದ ಮಾಡಿದಂಥ ವಿಚಾರವಾಗಿರುತ್ತದೆ. ಆದ್ದರಿಂದ ಆ ಕೇಸ್‌ಗಳ ಆದಿಯಾಗಿ, ಅದೇ ರೀತಿಯಲ್ಲಿನ ಕೇಸ್ ಇತರರ ಮೇಲೆಯೂ ಇರಬಹುದು, ಅಂಥ ಎಲ್ಲಾ ಕೇಸುಗಳನ್ನು ನಾವು ಹಿಂದಕ್ಕೆ ತೆಗೆದುಕೊಳ್ಳುತ್ತಿದ್ದೇವೆ. ಈ ನಿರ್ಧಾರ ಸರ್ಕಾರದ್ದು ತೀರ್ಮಾನವಾಗಿದೆ. ಅನಂತರ 15 ಅಂಶಗಳ ಪ್ರೋಗ್ರಾಂಗೆ ಸಂಬಂಧಪಟ್ಟ ಸಂದರ್ಭದಲ್ಲಿ ಇಂಪ್ಲಿಮೆಂಟೇಶನ್ ಬಗ್ಗೆ ಕೆಲವು ಸಾರಿ ಆ ಸಂದರ್ಭದಲ್ಲಿಯೂ ಕೆಲವು ಗಲಾಟೆಗಳು ನಡೆದವು. ಅವುಗಳು ಹಳೇಯ ಕೇಸುಗಳು. ಅವು ಇನ್ನೂ ಉಳಿದಿವೆ. ಅವುಗಳನ್ನು ಕೂಡ ನಾವು ಹಿಂದಕ್ಕೆ ತೆಗೆದುಕೊಳ್ಳತಕ್ಕಂಥ ತೀರ್ಮಾನವನ್ನು ನಾವು ಮಾಡಿದ್ದೇವೆ.

(ಮಾನ್ಯ ಸದಸ್ಯರುಗಳು ಮೇಜು ತಟ್ಟಿ ಹರ್ಷ ವ್ಯಕ್ತ ಪಡಿಸಿದರು.)

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ಮೇಜನ್ನು ಸ್ವಲ್ಪ ಜಂಟಲ್ ಆಗಿ ಹ್ಯಾಂಡಲ್ ಮಾಡಿ.

ಶ್ರೀ ಬಸವರಾಜ ರಾಯರೆಡ್ಡಿ: ಅವರಿಗೆ ಒಂದು ಹಲಗೆಯನ್ನು ಕೊಡಿಸಿ ಬಿಡಿ.

ಅಧ್ಯಕ್ಷರು: ಅದು ಕೆಲವು ಸಮಯ ಇವರಿಗೂ ಅನ್ವಯವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ: ಅನಂತರ ಕರ್ನಾಟಕ ರಾಜ್ಯದಲ್ಲಿ ದಲಿತರು ಅವರ ಹಕ್ಕುಬಾದ್ಯತೆಗಳ ಬಗ್ಗೆ, ಭೂಮಿಯ ಬಗ್ಗೆ, ಸಕ್ರಮಗೊಳಿಸುವ ಬಗ್ಗೆ ಚಳುವಳಿ ಮಾಡಿರಬಹುದು. ಏಕೆಂದರೆ ಬಗರ್‌ಹುಕುಂ ಸಾಗುವಳಿ ಮಾಡಿದ್ದ ಬಗ್ಗೆ ಸಕ್ರಮಗೊಳಿಸಲು ನಾವು ಈಗ ಕಾನೂನು ಮಾಡುತ್ತಿದ್ದೇವೆ. ಅವರು ತಮ್ಮ ಹೊಟ್ಟೆಗೆ ಅನ್ನಕ್ಕೋಸ್ಕರ ಮಾಡಿರತಕ್ಕಂಥಾದ್ದು ಅದು ಹರಿಜನ ಗಿರಿಜನರು ಯಾರೇ ಇರಬಹುದು. ಅಂಥ

ಕೇಸುಗಳನ್ನು ರಾಜ್ಯದಲ್ಲಿ ಎಲ್ಲಿದ್ದರೂ ಕೂಡ ಅವುಗಳನ್ನು ನಾವು ವಿತ್‌ಡ್ರಾ ಮಾಡುತ್ತಿದ್ದೇವೆ.

ಅನಂತರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂದಿತ್ತು. ಅದರ ಬಗ್ಗೆ ನಮ್ಮ ಅಲ್ಪಸಂಖ್ಯಾತ ಮಿತ್ರರಿಗೆ ನೋವು ಆಯಿತು, ಆ ಸಂದರ್ಭದಲ್ಲಿ ಕೆಲವು ಕೇಸುಗಳು ಬಿದ್ದುವು ಅವರು ಇವೊತ್ತಿಗೂ ಕೋರ್ಟ್‌ಗೆ ಓಡಾಡುತ್ತಿದ್ದಾರೆ. ಆ ಕೇಸ್‌ಗಳನ್ನು ಕೂಡ ವಿತ್‌ಡ್ರಾ ಮಾಡುತ್ತಿದ್ದೇವೆ, ಆ ಕೇಸ್‌ಗಳನ್ನು ಮುಂದುವರಿಸಿ ಉಪಯೋಗವಿಲ್ಲ ಎನ್ನುವ ದೃಷ್ಟಿಯಿಂದ ಒಟ್ಟು ಆರು ರೀತಿಯ ಈ ಕೇಸುಗಳನ್ನು, ಮೊಕದ್ದಮೆಗಳನ್ನು ಮಾನ್ಯ ಸಭಾಧ್ಯಕ್ಷರ ಅಪ್ಪಣೆ ಪಡೆದು ಸರಕಾರದವರು ವಿಥ್‌ಡ್ರಾ ಮಾಡುವ ನಿರ್ಧಾರವನ್ನು ನಾನು ಈ ಸಂದರ್ಭದಲ್ಲಿ ಪ್ರಕಟ ಮಾಡಿದ್ದೇವೆ. ಇದಲ್ಲದೇ ಇನ್ನೂ ಹಲವಾರು ವಿಚಾರಗಳಲ್ಲಿ ಮಾನ್ಯ ವಿರೋಧಪಕ್ಷದ ನಾಯಕರು, ಬೇರೆ ಬೇರೆ ಪಕ್ಷಗಳ ನಾಯಕರುಗಳು, ರೈತಸಂಘದ ಪ್ರತಿನಿಧಿಗಳು, ಇವರೆಲ್ಲರೂ ಮತ್ತು ಹೊರಗಡೆಯಲ್ಲಿಯೂ ಕೂಡ ಕೆಲವಾರು ಹಲವಾರು ವಿಚಾರಗಳನ್ನು ಎತ್ತಿದ್ದಾರೆ. ಈಗಾಗಲೇ ಸಂವಿಧಾನ ತಿದ್ದುಪಡಿಗೆ ಸಂಬಂಧಪಟ್ಟಂಥ ಸಮಸ್ಯೆ. ಇವೊತ್ತು ಬೆಲೆ ನಿಗದಿ ಮಾಡತಕ್ಕಂಥ ವಿಚಾರದಲ್ಲಿ ರಾಜ್ಯ ಸರಕಾರಕ್ಕೆ ಆವೊತ್ತು ಅಧಿಕಾರ ಇಲ್ಲ ಎನ್ನತಕ್ಕಂಥ ಮಾತನ್ನು ತಾವುಗಳು ಒಪ್ಪುತ್ತೀರಿ ಎಂದು ನಾನು ಭಾವಿಸಿದ್ದೇನೆ. ಈ ಸಂದರ್ಭದಲ್ಲಿ ಅಂಥ ವಿಚಾರದ ಬಗ್ಗೆ ನಾವು ಒಂದು ಸ್ಥಾಯಿ ಸಮಿತಿಯನ್ನು ಪ್ರಕಟ ಮಾಡಿದ್ದೇವೆ.

ಆ ಸ್ಥಾಯಿ ಸಮಿತಿಯ ಒಂದು ಅಭಿಪ್ರಾಯವನ್ನು ಪಡೆದು ಕೇಂದ್ರ ಸರ್ಕಾರಕ್ಕೆ ತಿಳಿಸೋಣ. ಇದನ್ನು ನಮ್ಮ ಮಟ್ಟದಲ್ಲಿ ನಾವು ಮಾಡಿಕೊಂಡಿದ್ದೇವೆ. ಅವರಿಗೆ ನಾವು ತಿಳಿಸೋಣ, ಒತ್ತಡವನ್ನು ತರೋಣ. ಈ ಒಂದು ವಿಚಾರವನ್ನು ಈ ಸಂದರ್ಭದಲ್ಲಿ ತಿಳಿಸುವುದರ ಜೊತೆಯಲ್ಲಿ ಇನ್ನೂ ಕೂಡ ಬೇರೆ ವಿಚಾರದಲ್ಲಿಯೂ ಕೂಡಾ ಒತ್ತಡಗಳನ್ನು ಇಟ್ಟಿರತಕ್ಕಂಥ ವಿಚಾರಗಳು ಕೂಡ ಇಲ್ಲಿ ಇವೆ. ಅದಕ್ಕೆ ಸಂಬಂಧಪಟ್ಟಿರತಕ್ಕಂಥ ಕೆಲವು ವಿಚಾರಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ಲೋನ್ ವೇವಿಂಗ್ ಆ ವಿಚಾರದಲ್ಲಿ ವಿವರಗಳ ಬಗ್ಗೆ ನಾನು ಇನ್ನು ಸ್ವಲ್ಪ ಹೇಳಬೇಕಾಗಿದೆ.

Regarding the loan waiving. In the matter of waiver of farmers' loans up to Rs.10,000/- I would like to reiterate that our government is as sympathetic and considerate as anybody else. We also concede that such waiver should be un conditional. ಇವತ್ತು ಈ ವಿಚಾರದಲ್ಲಿ ಯಾವುದೇ ಷರತ್ತು ಇರಬಾರದು ಎನ್ನತಕ್ಕಂಥ ಅಭಿಪ್ರಾಯವನ್ನು ನಾವು ಕೂಡ ಇಟ್ಟು ಇದನ್ನು ಪಕ್ಷಾತೀತವಾಗಿ ನಾವೆಲ್ಲರೂ ಸೇರಿ ಮಾಡಿದ್ದೇವೆ. When Mr.V.P. Singh was the Prime Minister, they have averred about this loan waiver scheme up to Rs.10,000/- ಇದರ ಬಗ್ಗೆ ಹಣ ಎಷ್ಟು ಬಂದಿದೆ ಎನ್ನತಕ್ಕಂಥ ಅಂಕಿಅಂಶಗಳನ್ನು ಕೂಡ ನಾನು ಕೊಡುತ್ತಿದ್ದೇನೆ ಮತ್ತು ಇವತ್ತಿನವರೆಗೂ ಏನು ಕಾರ್ಯಕ್ರಮಗಳನ್ನು ಹಾಕಿದ್ದೇವೆ ಎನ್ನತಕ್ಕಂಥದ್ದನ್ನು ನಾನು ಈಗ ತಮಗೆ ತಿಳಿಸುತ್ತಿದ್ದೇನೆ.

The government has noticed that conditions regarding the Anewari etc., have only created confusion for the farmers. There have been instances where even in the irrigated areas, crops have failed during the period under a consideration. But in those areas the Anewari system of crop estimation is not prevalent at all with the result that the genuine entitlement of the farmers

in these areas for the loan waiver has not been given to them. We consider that this is unfair. Over the years, the Anewari system of crop estimation itself has deteriorated in its practical application, That is why we also feel that these conditions attached to the loan waiver should be removed and we have taken up the matter with the government of India accordingly.

ಏನೆಂದರೆ ನಾವೇ ಬರೀ ಮಾಡಿಬಿಟ್ಟಿದ್ದೇವೆ ಎಂದು ಹೇಳಿದರೆ ಸಾಲದು. ನಾಳೆ ಅವರು ಎಷ್ಟು ಬಾಕಿ ಇದೆ ಎಂದು ಹೇಳಿ ಅವರು ನಮ್ಮ ಮೇಲೆ, ನಮ್ಮ ತಲೆ ಮೇಲೆ ಬಿಡುತ್ತಾರೆ.

We stand by the farmers of Karnataka state so far as loan waiving is concerneduptoRs.10,000/-ಈ ಕಂಡೀಷನ್ಸ್ ಇರಬಾರದು ಎನ್ನತಕ್ಕಂಥ ಅಭಿಪ್ರಾಯವನ್ನು ನಾವು ಕೂಡಾ ಇಟ್ಟುಕೊಂಡಿದ್ದೇವೆ. ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಮತ್ತೆ ಒತ್ತಡವನ್ನು ನಾವು ನೀವು ಎಲ್ಲರೂ ಸೇರಿ ತರೋಣ. The Members of the parliament belonging to our state have also taken up the matter with the Prime Minister and others concerned. ಇದರ ಬಗ್ಗೆ ನಾವು ಕೂಡ ಕ್ರಮ ತೆಗೆದುಕೊಂಡಿದ್ದೇವೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ನಾನು ಈ ಮೊದಲೇ ತಿಳಿಸಿದ್ದೇನೆ. ಇದು ಬಹಳ ಮುಖ್ಯ ಇರತಕ್ಕಂಥದ್ದು.

Let us all hope that the Government of India will appreciate the reasonableness and practicability of our demand that all the conditions must be removed. Pending decision of the Government of India in this regard, we in the State have issued instructions to all the officers concerned that coercive measures should not be adopted in collecting loans upto Rs. 10,000/-in all cases since all the loans upto Rs. 10,000/- is waived under the Loan-Waiving scheme evolved by the Government of India. ಅದರಲ್ಲೂ ಕೂಡ ಎಲ್ಲಿಯೊದರೂ ತೊಂದರೆ ಮತ್ತೊಂದು ಯಾರಿಗಾದರೂ ಸಾಲ ಪಡೆದಿರತಕ್ಕಂಥ ರೈತರಿಗೆ ಅಪ್‌ಟು ಹತ್ತು ಸಾವಿರ ರೂಪಾಯಿಗಳು ಬಂದಿದೆ ಎಂದರೆ ದಯಮಾಡಿ ನಮ್ಮ ಗಮನಕ್ಕೆ ತರಬೇಕು. ಅದರ ಬಗ್ಗೆ ನಮ್ಮ ಅಧಿಕಾರಿಗಳಿಗೂ ಎಲ್ಲಾ ನಾವು ತಿಳಿಸಿದ್ದೇವೆ. ಇನ್ನೊಂದು ಸುತ್ತೋಲೆಯನ್ನು ಕೂಡ ಕಳುಹಿಸಿಕೊಡುತ್ತೇವೆ. ಅದರ ಮೇಲೂ ಕೂಡ ಅಪ್‌ಟು ಹತ್ತು ಸಾವಿರ ರೂಪಾಯಿಗಳವರೆಗೆ ಸಾಲ ಇದ್ದ ರೈತರಿಗೆ ಎಲ್ಲಿಯಾದರೂ ತೊಂದರೆ ಬಂದರೆ ಈ ಸದನದ ಮಾನ್ಯ ಸದಸ್ಯರು ಅಥವಾ ಹೊರಗಡೆ ಇದ್ದವರೂ ಕೂಡ ದಯಮಾಡಿ ಸರ್ಕಾರಕ್ಕೆ ಗಮನಕ್ಕೆ ತರಬೇಕು, ಇದರ ಬಗ್ಗೆ ನಾವು ರೈತರಿಗೆ ರಕ್ಷಣೆಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ಮಾತನ್ನು ತಾವು ಪದೇ ಪದೇ ಹೇಳುತ್ತಿದ್ದೀರಿ. ಕೇಂದ್ರ ಸರ್ಕಾರಕ್ಕೆ ನಾವು ಹೇಳುತ್ತಿದ್ದೇನೆ ಎಂದು ಈ ಮಾತನ್ನು ಅನೇಕ ಬಾರಿ ಹೇಳಿದ್ದೀರಿ. ಹೊಸದಾಗಿ ಏನು ಹೇಳಿದಂತೆ ಆಯಿತು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ನಾನು ಹೇಳುವುದು ಇನ್ನು ಸ್ವಲ್ಪ ಇದೆ. ಸ್ವಲ್ಪ ತಾಳಿ ನೀವು. ಈಗ ಇದರಲ್ಲಿ ಅಮೌಂಟ್ ಎಷ್ಟು ಇದೆ ಎಂದು ಅಂಕಿ ಸಂಖ್ಯೆಗಳು

ನಿಮಗೂ ಸಿಕ್ಕಿದರೆ ಇದರಿಂದ ಅನುಕೂಲವಾಗುತ್ತದೆ. ಅದನ್ನು ನಾನು ಬಜೆಟ್‌ನಲ್ಲಿ ಕೂಡ ಪ್ರಸ್ತಾಪ ಮಾಡಿದ್ದೇನೆ. ವಿವರಣೆಯನ್ನು ಕೊಡುವುದಕ್ಕೆ ಅದರಲ್ಲಿ ಆಗಲಿಲ್ಲ. ವಿವರಣೆಯನ್ನು ಬಜೆಟ್ ಸ್ಪೀಚ್‌ನಲ್ಲಿ ಹಾಕಲಿಲ್ಲ. ಈಗ ಸ್ಟೇಟ್‌ನಿಂದ 66.31, ಸೆಂಟ್ರಲ್‌ನಿಂದ 66.31ಒಟ್ಟು 132-133ಕೋಟಿ ರೂಪಾಯಿಗಳು ಎಂದು ಇಟ್ಟುಕೊಳ್ಳೋಣ.

Amount so far received from State is 33.500 crores, From Centre 33,500 crores. Totally it becomes 67 crores. Total amount outstanding Rs. 32 and * crores from the State and 32 and add crores from the Centre, totalling to about 65 crores. As on today, the State Government is paying the first instalment of Rs. 12.39 crores of the loans taken from the NABARD. According to our figures, the number of beneficiaries are 4,71,399. This is about the loan waiving.

Then one more demand is about allocation of funds to the rural sector. I would like to bring to your kind notice. The Hon'ble Members are aware that demand was made by the Deputy Prime Minister Sri Devi Lalji that atleast 50% of the Plan or budget fund should be primarily for the scheme to be implemented in the rural areas. In our State, already there is a demand that 75% of the funds should be allocated to the rural schemes. Our Government policy is now well known. It has been made very clear in the Governor's Address and also in my Budget speech that our number one priority is towards the betterment of the rural poor people including farmers. All our efforts will be oriented towards that goal. The five new schemes that we have announced in the budget namely "Akshaya" (Milk Scheme), "Shushrusha" (Medical Check-up programme), "Vishwa" (Rural Cottage Industries Scheme), "Ashraya" (Housing Scheme), "Aradhana" (for repairs and renovation of temples) are all meant for the rural areas. There can be no better proof of our intentions and conscious efforts in the matter than these. The investment proposals in the State Public Sector industries which are perennially sick, are being formulated in such a manner that the funds released from them will be diverted to the rural development programmes in those areas and where the industries now existing also in the areas where they are not existing. The flow of funds both Government as well as institutional finances from the banks etc., to the rural areas in Karnataka is going to be of such magnitude, that has not been seen in the recent years, At the same time, the Hon'ble Members are also aware that our proposals for plan allocations have to be approved by the Planning Commission and Government of India and unless they change their attitude, we will find it difficult to put our theory into practice."

Our Hon'ble Members will agree that our budget itself including the Governor's address is a definite indication in this direction to increase the Plan and the Budget allocation for rural areas. ಎನರ್ ಜೈಷನ್ ಆಫ್ ಪಂಪ್

ಸೆಟ್ ವಿಚಾರದಲ್ಲಿ ಈಗಾಗಲೇ ತಿಳಿಸಿದ್ದೇನೆ. ಮತ್ತೆ ಇದರಲ್ಲಿ ಹೇಳತಕ್ಕದ್ದು ಏನೂ ಇಲ್ಲ.

Now regarding Energisation of Pumpsets, ಬೇರೆ ಬೇರೆ ಪ್ರಾಮುಖ್ಯವಾದ ವಿಚಾರವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತೇನೆ.

This is the power tariff for lift irrigation scchemes in the co-operative sector. The concession given so far upto 5 H.P. pumps is Rs.90 to 50/- and for 5 H.P. upto 10 H.P. pumps is Rs.130/- to Rs.60/- ಅದನ್ನು ಇಂಡಿವಿಜುಯಲ್ ಪಂಪ್ ಸೆಟ್‌ಗೂ ಮಾಡಿ ಕನ್‌ಸೇಷನ್ ಎಲ್ಲರಿಗೂ ಕೊಟ್ಟಿರತಕ್ಕದ್ದು. ಕರ್ನಾಟಕ ರಾಜ್ಯದಲ್ಲಿ ಲಿಫ್ಟ್ ಇರಿಗೇಷನ್, ಸ್ಕೀಮ್ ಇದೆ. ಇವತ್ತು ಯುನಿಟ್‌ಗೋಸ್ಕರ ಇಷ್ಟೊಂದು ಮಾಡಿರುವುದರಿಂದ ನಮ್ಮಿಂದ ಕಟ್ಟಲಿಕ್ಕೆ ಆಗುವುದಿಲ್ಲವೆಂದು ಬಳ್ಳಾರಿ ಜಿಲ್ಲೆಯಿಂದ ಬಂದಿದ್ದರು. ಇನ್ನು ಬೇರೆ ಬೇರೆ ಜಿಲ್ಲೆಯಿಂದಲೂ ಬಂದಿದ್ದರು. ಪ್ರೊ. ನಂಜುಂಡಸ್ವಾಮಿಯವರು ಹಾಗೂ ಬಾಬಾಗೌಡರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ.

"There are 657 Lift Irrigation Scheme in the State, out of which 150 are high tension connection and 507 are low-tension connections. These schemes are now being charged 55 paise per unit for High tension connections and 50 paise per unit for Low tension connections. There have been many representations from the farmers who are members of thesse Lift Irrigation Schemes that they are required to pay substantially higher amount than the I.P.sets. We have now decided to change the pattern of the charges. These schemes will be hereafter charged on the basis of the connected load and we charge Rs. 250/- per H.P per annum. (We have removed charging per unit). This is for the co-operative sector and for other schemes also that are run by the P.W.D., We are now charging Rs. 250/- per H.P. per annum uniformly to all the High Tension and Low Tension installations. By this method, the farmers of these 657 Lift Irrigation Societies Particularly, will get a relief of Rs. 2.6 crores every year. The Government have also decided to reimburse K.E.B., for this loss. ಎಲ್ಲರಿಗೂ ಸೇರಿಬಿಟ್ಟ ನಾವು ಮಾಡಿದ್ದೇವೆ. 250 ರೂಪಾಯಿ ಪರ್ ಹಾರ್ಸ್‌ಪವರ್, ಪರ್ ಆನಮ್ ಅವರು ಕೊಟ್ಟರೆ ಸಾಕು. 2.6 ಲಕ್ಷ ರೂಪಾಯಿ ಉಪಯೋಗವನ್ನು ಅವರು ಪಡೆಯುತ್ತಾರೆ. ನಾವು ಈ ಹಣವನ್ನು ರೈತರ ಪರವಾಗಿ ಕೆ.ಇ.ಬಿ.ಗೆ. ಕಟ್ಟಲಿಕ್ಕೆ ತಯಾರಾಗಿದ್ದೇವೆ.

I am confident that the farmers will appreciate the concern of the Government towards their welfare.

ಮಾನ್ಯ ಅಧ್ಯಕ್ಷರೆ, ಇಲ್ಲಿ ಕರ್ನಾಟಕ ರಾಜ್ಯದ ರೈತ ಸಮುದಾಯದ ಬಗ್ಗೆ ಸಂಬಂಧ ಪಟ್ಟಿರತಕ್ಕಂಥ ಪ್ರಮುಖವಾಗಿರತಕ್ಕಂಥ ಕೆಲವು ವಿಚಾರಗಳನ್ನು ನಾನು ಈಗಾಗಲೇ ಪ್ರಸ್ತಾಪ ಮಾಡಿದ್ದೇನೆ. ಎಲ್ಲಾ ವಿಚಾರಗಳನ್ನು ನಾನು ಹೇಳಿದ್ದೇನೆ ಎಂದು ನನ್ನ ಭಾವನೆ. ಇನ್ನೂ ಕೂಡ ನಾನು ಈಗಾಗಲೇ ತಿಳಿಸಿದ ಹಾಗೆ ಕೆಲವು ವಿಚಾರಗಳು ಇನ್ನೂ ಕೂಡ ಇವೆ. ಕೆಲವು ನಮ್ಮ ವ್ಯಾಪ್ತಿಗೆ ಅವು ಬರುವುದಿಲ್ಲ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ನಾವು ಪ್ರಕಟಣೆಯ ಮುಖಾಂತರ ಕೆಲವು ತೀರ್ಮಾನವನ್ನು ಕರ್ನಾಟಕ ರಾಜ್ಯದ ಕಲ್ಯಾಣಕ್ಕೋಸ್ಕರ ಅವರ ಸಮಸ್ಯೆಗೆ ಪರಿಹಾರ ಕೊಡಲಿಕ್ಕೋಸ್ಕರ ನಾವು ಮಾಡಿದ್ದೇವೆ. ಈ ಬಗ್ಗೆ ಕರ್ನಾಟಕ ರಾಜ್ಯದ

ರೈತರ ಬಗ್ಗೆ ನಂಬಿಕೆ ಇಟ್ಟು ಈ ಮಾತನ್ನು ಸರ್ಕಾರದ ಪರವಾಗಿ ಹೇಳುತ್ತೇನೆ. ಇದನ್ನು ಅವರು ಸಹೃದಯದಿಂದ ಸ್ವಾಗತ ಮಾಡುತ್ತಾರೆ ಎನ್ನತಕ್ಕ ಮಾತನ್ನು ಹೇಳಿ, ಮತ್ತೆ ತೊಂದರೆಗಳು ಸಹಜವಾಗಿ ಈ ಸಮುದಾಯಕ್ಕೆ ಆಗಾಗ್ಗೆ ಬರುತ್ತದೆ. ಅದು ವೇರಿಯಸ್ ನೇಚರ್ ಬೇರೆ ಬೇರೆ ಕಾರಣಗಳಿಂದ ಬರುತ್ತದೆ. ಹಾಗೆ ಬಂದಾಗ ಆ ವಿಚಾರದ ಬಗ್ಗೆ ಮತ್ತೆ ನಾವು ಸರ್ಕಾರದವರು ಅಷ್ಟೇ ತೆರೆದ ಮನಸ್ಸಿನಿಂದ ಚರ್ಚೆ ಮುಖಾಂತರ ನಾವು ಸಮಸ್ಯೆಗಳಿಗೆ ಶಾಂತಿಯುತ ಮಾರ್ಗದಲ್ಲಿ ಪರಿಹಾರ ಕಂಡುಹಿಡಿಯಲಿಕ್ಕೆ ತಯಾರಿದ್ದೇವೆ. ಕರ್ನಾಟಕ ರಾಜ್ಯದ ರೈತರ ಬಗ್ಗೆ ನಾವು ಅಪಾರವಾಗಿ ನಂಬಿಕೆಯನ್ನು ಇಟ್ಟಿದ್ದೇವೆ. ಶಾಂತಿಯುತವಾದ ಮಾರ್ಗದಲ್ಲಿ ಹೋಗಲಿಕ್ಕೆ ಅಷ್ಟೇ ಅವರು ಚಾರಿತ್ರ್ಯವನ್ನು ಹೊಂದಿರತಕ್ಕಂಥವರು, ಅಷ್ಟೇ ನಂಬಿಕೆಯನ್ನು ಇಟ್ಟಿಕೊಂಡಿರತಕ್ಕವರು ಎನ್ನತಕ್ಕ ಮಾತನ್ನು ಹೇಳಿ, ಈ ವಿಚಾರದಲ್ಲಿ ಹೆಚ್ಚು ಬೆಳಕನ್ನು ಚೆಲ್ಲತಕ್ಕ ವಿಚಾರದಲ್ಲಿ ವಿರೋಧಪಕ್ಷದ ನಾಯಕರು ಉಪ ನಾಯಕರಾದಿಯಾಗಿ ಮಾನ್ಯ ಸದಸ್ಯರುಗಳು, ಮತ್ತು ಬೇರೆ ಪಕ್ಷದ ನಾಯಕರುಗಳು, ಆ ಸದನದಲ್ಲೂ ಕೂಡ ಸಲಹೆಗಳನ್ನು ಸೂಕ್ತವಾಗಿ ಕೊಟ್ಟಿದ್ದೀರಿ. ಅದಕ್ಕೆ ಈ ಸಂದರ್ಭದಲ್ಲಿ ನಾನು ತಮ್ಮ ಮುಖಾಂತರ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಮತ್ತು ಈ ಕಡೆಗೆ ಕುಳಿತಿರತಕ್ಕ ಮಾನ್ಯ ಸದಸ್ಯರು ಯಾರು ಯಾರು ಬೆಳಕು ಚೆಲ್ಲತಕ್ಕಂಥ ಒಂದು ಕಾರ್ಯಕ್ರಮವನ್ನು ತಾವು ಹಾಕಿಕೊಂಡಿದ್ದೀರಿ, ತಮಗೂ ಅಭಿನಂಧನೆಯನ್ನು ಸಲ್ಲಿಸಿ, ಈ ಒಂದು ಹೇಳಿಕೆಯನ್ನು ಕೊಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೂ ನಾನು ಅಭಿನಂದನೆಯನ್ನು ಸಲ್ಲಿಸಿ, ನನ್ನ ಹೇಳಿಕೆಯನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಡಿ.ಬಿ. ಚಂದ್ರೆಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಚುನಾವಣಾ ಪ್ರಣಾಳಿಕೆಯನ್ನು ಈ ಸದನದ ಮುಂದೆ ಬಿಡುಗಡೆ ಮಾಡಿದ್ದಾರೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ನನ್ನದು ಎರಡು ಕ್ಲಾರಿಫಿಕೇಷನ್, ಯಾವುದು ಬಿಟ್ಟಿದೆಯೋ ಅದನ್ನು ....

ಅಧ್ಯಕ್ಷರು : ತಮಗೆ ಅವಕಾಶವನ್ನು ಕೊಡುತ್ತೇನೆ. ಸದನದ ನಿಯಮಾವಳಿ 328ರ ಪ್ರಕಾರ ಸಾರ್ವಜನಿಕ ಪ್ರಾಮುಖ್ಯತೆಯುಳ್ಳ ಒಂದು ವಿಷಯದ ಮೇಲೆ ಮಾನ್ಯ ಅಧ್ಯಕ್ಷರ ಒಪ್ಪಿಗೆಯೊಡನೆ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ಹೇಳಿಕೆಯನ್ನು ಕೊಡಬಹುದು. ಆದರೆ ಹೇಳಿಕೆಯನ್ನು ಕೊಡುವಾಗ ಯಾವುದೇ ಪ್ರಶ್ನೆಯನ್ನೂ ಕೇಳತಕ್ಕದ್ದಲ್ಲ...

ಶ್ರೀ ಡಿ.ಬಿ. ಚಂದ್ರೇಗೌಡ : ಹೇಳಿಕೆಯನ್ನು ಕೊಡುವಾಗ ನಾನು ಕೇಳಲೇ ಇಲ್ಲ. ನಾನು ಅಷ್ಟು ಗಂಭೀರವಾಗಿ ಕುಳಿತಿದ್ದೆ....

(ಗೊಂದಲ)

ಅಧ್ಯಕ್ಷರು: ನಾನು ಕನ್ನಡದಲ್ಲಿ ಓದಿ ತಪ್ಪು ಮಾಡಿದ್ದೇನೆ. ಈಗ ಇಂಗ್ಲೀಷ್‌ನಲ್ಲಿ ಇರುವುದನ್ನು ಓದುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಕನ್ನಡದಲ್ಲಿ ಸರಿಯಾಗಿ ಅರ್ಥ ಮಾಡಿಕೊಂಡಿದ್ದೇನೆ.

Mr. SPEAKER : " A statement may be made by a Minister on a matter of public importance with the consent of the Speaker, but no question shall be asked at the time statement is made."

But considering the overriding importance that this question has assumed . we will keep this rule in abeyance.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಒಟ್ಟಾರೆ ಮಾನ್ಯ ಮುಖ್ಯಮಂತ್ರಿಗಳು ರೈತರ ತುಟಿಗೆ ತುಪ್ಪವನ್ನು ಹಚ್ಚಿದ್ದಾರೆ. ಅನೇಕ ಸ್ವಾಗತಾರ್ಹ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಬಹಳ ಮುಖ್ಯವಾಗಿ ರೈತರ ಸಮಸ್ಯೆಯ ಬಗ್ಗೆ ನಾವು ಈ ಸದನದಲ್ಲಿ ಪದೇ ಪದೇ ಚರ್ಚೆ ಮಾಡುತ್ತಿದ್ದುದು ಸಾಲ ಮನ್ನಾ ವಿಚಾರ. ಸಾಲ ಮನ್ನಾ ವಿಚಾರದಲ್ಲಿ ನಿಖರವಾಗಿ ತಾವು ಏನು ಮಾಡುತ್ತೀರೆಂಬುದನ್ನು ಹೇಳಿಲ್ಲ. ಹಳೇ ಕಥೆಯನ್ನೇ ಹೇಳಿಕೊಂಡು ಬಂದಿದ್ದೀರಿ. ಕೇಂದ್ರ ಸರ್ಕಾರಕ್ಕೆ ಬರೆಯುತ್ತೇವೆ, ಅವರ ಒಪ್ಪಿಗೆ ಪಡೆಯುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರದ ನಿರ್ಧಾರ ನಿಖರವಾಗಿ, ನಿರ್ದಿಷ್ಟವಾಗಿ ಇಂಥ ನಿಬಂಧನೆಗೆ ಒಳಪಟ್ಟು ವಜಾ ಮಾಡಿದ್ದೇವೆಂದು ಹೇಳಿದ್ದಾರೆ. ಕರ್ನಾಟಕ ರಾಜ್ಯಕ್ಕೋಸ್ಕರ ಕೇಂದ್ರ ಸರ್ಕಾರ ತನ್ನ ನಿಬಂಧನೆಗಳನ್ನು ಈಗ ಬದಲಾಯಿಸುವುದಿಲ್ಲ. ಬದಲಾಯಿಸುವಂಥ ಸರ್ಕಾರವೂ ಇಲ್ಲ. ಸರ್ಕಾರಕ್ಕೆ ಬರೆಯುತ್ತೇವೆ ಎಂದರೆ ಯಾವ ಸರ್ಕಾರಕ್ಕೆ? ಮುಂದೆ ಚುನಾವಣೆ ಆದಮೇಲೆ ಬರತಕ್ಕ ಸರ್ಕಾರಕ್ಕೆ ಬರೆಯುತ್ತೀರಾ? ಈ ಸರ್ಕಾರವಂತೂ ಯಾವುದೇ ನಿರ್ಧಾರವನ್ನೂ ತೆಗೆದುಕೊಳ್ಳುವುದಿಲ್ಲ. ಆದರೆ ನಾನು ಸರ್ಕಾರದವರನ್ನು ಕೇಳತಕ್ಕದ್ದು ಬಹಳ ಮುಖ್ಯವಾಗಿ 10 ಸಾವಿರ ರೂಪಾಯಿಯ ಸಾಲ ಮನ್ನಾ ಏನು ಅಲ್ಲಿ ನಿಗದಿ ಮಾಡಿದೆ. ಆ ವ್ಯಾಪ್ತಿಯಿಂದ ಹೊರಗಡೆ ಬರತಕ್ಕ ರೈತರ ಸಾಲವನ್ನು ತಾವೇ ಜವಾಬ್ದಾರಿಯನ್ನು ತೆಗೆದುಕೊಂಡು ವಜಾ ಮಾಡುತ್ತೇವೆಂದು ಹೇಳಿದ್ದರೆ ಅವರಿಗಿಂತ ಹೆಚ್ಚಿಗೆ ನಾವು ಮೇಜು ತಟ್ಟಬಹುದಿತ್ತು. ಆದರೆ ಇದರಲ್ಲಿ ಆ ಪ್ರಸ್ತಾಪವೇ ಇಲ್ಲ. ಮುಖ್ಯವಾಗಿ ಪ್ರಕೃತಿಯ ವಿಕೋಪ. ಈಗ ನಾವು ರಾಜ್ಯದ ಉದ್ದಗಲಕ್ಕೆ ಕ್ಷಾಮದ ದವಡೆಗೆ ಸಿಕ್ಕಿದ್ದೇವೆ. ಇದಕ್ಕೆ ವಿಶೇಷವಾಗಿ ಬರ ಪರಿಹಾರ ಕಾಮಗಾರಿಗಳಿಗಾಗಿ ವಿಶೇಷ ನಿಧಿಯನ್ನು ತೆಗೆದಿಟ್ಟಿದ್ದೇವೆ ಎಂದು ಹೇಳಿದ್ದರೆ ನಿಮ್ಮ ಬೆನ್ನನ್ನು ತಟ್ಟಬಹುದಿತ್ತು. ಆ ಕೆಲಸವನ್ನೂ ಕೂಡ ನೀವು ಮಾಡಿಲ್ಲ. ಮುಖ್ಯವಾಗಿ ಏತ ನೀರಾವರಿ ಯೋಜನೆಗಳನ್ನು ಈ ಸಾರಿ ಪ್ರಾರಂಭ ಮಾಡುವುದಕ್ಕೆ ನಾನು ಪ್ರಾರ್ಥನೆ ಮಾಡಿದ್ದೆ. ಏತ ನೀರಾವರಿಯ ಬಗ್ಗೆ ಚಕಾರ ಶಬ್ದ ಇಲ್ಲ. ಏನಾದರೂ ಲಿಫ್ಟ್ ಇರಿಗೇಷನ್ ಸ್ಕೀಂಗಳನ್ನು ಅನೌನ್ಸ್ ಮಾಡಿದ್ದೀರಾ? ತೆಗೆದುಕೊಳ್ಳುತ್ತೀರಾ, ಎಂಬ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಿಲ್ಲ. ರೈತರ ಬರ ಪರಿಹಾರದ ಬಗ್ಗೆ ಹೇಳುವಾಗ ಏತ ನೀರಾವರಿಯ ಬಗ್ಗೆ ಪ್ರಸ್ತಾಪ ಮಾಡುತ್ತೀರೇನೋ ಎಂದು ಅಂದುಕೊಂಡಿದ್ದೆ. ಅದನ್ನೂ ಕೂಡ ನೀವು ಮಾಡಲಿಲ್ಲ. ಡ್ರೈ ಲ್ಯಾಂಡ್ ಡೆವಲಪ್‌ಮೆಂಟ್ ಬಗ್ಗೆ ನಾನು ಬಹಳ ದೀರ್ಘವಾಗಿ ವಿಚಾರವನ್ನು ಮಂಡನೆ ಮಾಡಿದ್ದೆ. ಇದರ ಬಗ್ಗೆ ಕೂಡ ನಿಮ್ಮ ಮಾನ್ಯ ಮುಖ್ಯಮಂತ್ರಿಗಳು ಒಂದೇ ಒಂದು ಚಕಾರವನ್ನೂ ಕೂಡ ಹೇಳಿಲ್ಲ, ಎಲ್ಲದಕ್ಕಿಂತ ಮುಖ್ಯವಾಗಿ ಈಗಿರತಕ್ಕ ಬರ ಪರಿಸ್ಥಿತಿಯಿಂದಾಗಿ ರೈತರ ನೀರಿನ ಉಪಯೋಗವನ್ನು ಮಿತವ್ಯಯವಾಗಿ ಮಾಡುವುದಕ್ಕೆ ಒಂದು ಹೊಸ ಯೋಜನೆಯನ್ನು ಅಂದರೆ ಹನಿ ನೀರಾವರಿ ಯೋಜನೆ ಎಂದು ಏನು ಮಾಡಿದ್ದೀರಿ ಅದಕ್ಕೆ ಸರ್ಕಾರದವರು ನೀವೇ ಕಾರ್ಖಾನೆಗಳನ್ನು ತೆರೆದು ಹನಿ ನೀರಾವರಿ ಯೋಜನೆಗೆ ಬೇಕಾಗಿರತಕ್ಕಂಥ ಮೆಟೀರಿಯಲ್ಸ್‌ನ್ನು ಒದಗಿಸಿ ಅದು ಸದ್ಯಕ್ಕೆ ಸಾಧ್ಯವಾಗದಿದ್ದರೆ ಕನಿಷ್ಠ ಶೇಕಡ 50ರಷ್ಟಾದರೂ ಅವರಿಗೆ ಸಬ್ಸಿಡಿಯನ್ನು ಕೊಡತಕ್ಕ ಕಾರ್ಯಕ್ರಮವನ್ನು ಮಾಡಿ ಎಂದು ನಾನು ಹೇಳಿದ್ದೆ. ಅದರ ಬಗ್ಗೆ ಕೂಡ ಚಕಾರ ಇಲ್ಲ, ಸಿಂಪತೆಟಿಕ್ ಕನ್‌ಸಿಡರೇಷನ್ ಮೇಲೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ, ನಮ್ಮದು 40 ಸಾವಿರ ಟಾರ್ಗೆಟ್ ಎನರ್ಜೈಸೇಷನ್ ಆಫ್

ದಿ ಪಂಪ್ ಸೆಟ್ಸ್ ಇತ್ತು. ಈಗ 60 ಸಾವಿರಕ್ಕೆ ಮಾಡಿದ್ದೇವೆ. ಇನ್ನೂ 5 ಸಾವಿರಕ್ಕೆ ಮಾಡುತ್ತೇವೆ ಎಂದು ಹೇಳಿದ್ದೀರಿ. ಹಿಂದಿನ ಮಾನ್ಯ ಅರ್ಥ ಮಂತ್ರಿಗಳು ತಮ್ಮ ಭಾಷಣದಲ್ಲಿ ನಿಗಧಿ ಮಾಡಿದ್ದುದು 60 ಸಾವಿರ. ಅವರ ಭಾಷಣವನ್ನು ನಾನು ಈ ಶಾಸನ ಸಭೆಗೆ ಓದಿ ಹೇಳಿದ್ದೇನೆ. ಇಲ್ಲ ಎಂದು ತಾವು ಹೇಳುವುದಾದರೆ ಮತ್ತೊಂದು ಸಾರಿ ಸರಿಪಡಿಸಿಕೊಳ್ಳೋಣ. ನೀವಾದರೂ ಸರಿಪಡಿಸಿಕೊಳ್ಳಿ, ಇಲ್ಲದಿದ್ದರೆ ನಾನಾದರೂ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ನಿಖರವಾಗಿ ಏತ ನೀರಾವರಿ ಕಾಮಗಾರಿಗಳ ಬಗ್ಗೆ ಅಂದರೆ ಮಲೆನಾಡಿನ ಪ್ರದೇಶದಿಂದ ಬರತಕ್ಕ ತುಂಗಾ ಇರಬಹುದು, ಅಥವಾ ಕಾವೇರಿ ಬೇಸಿನ್ ಇರಬಹುದು, ಈ ಸಾರಿ ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳುತ್ತೀರಾ ಎಂದು ಪ್ರಸ್ತಾಪ ಮಾಡುತ್ತೇನೆ.

ಮತ್ತೊಂದು ವಿಚಾರವನ್ನು ಇವತ್ತು ಬೆಳಿಗ್ಗೆ ನಾನು ಪ್ರಸ್ತಾಪ ಮಾಡಿದ್ದೆ. ತುಂಗಭದ್ರಾ ಎಡದಂಡೆ ನಾಲೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇನೆಂದು ಹೇಳಿದ್ದರು. ಅದನ್ನು ತಾವು ಕೊಡಿಸಿಕೊಡಬೇಕು.

ಮಾನ್ಯ ಅಧ್ಯಕ್ಷರೇ, ಇನ್ನು ಸ್ಟ್ಯಾಂಪ್ ಡ್ಯೂಟಿ ಎಕ್ಸೆಂಪಷನ್ ಬಗ್ಗೆ ಮಾತನಾಡಿ ಕನಿಷ್ಠ 50 ಸಾವಿರ ರೂಪಾಯಿವರೆಗೆ ಎಕ್ಸೆಂಪಷನ್ ಕೊಡಬೇಕೆಂದು ಹೇಳಿದ್ದೆವು. ತಮ್ಮ ಉತ್ತರದಲ್ಲಿ ಅದನ್ನೆಲ್ಲಾ ಮಾಡುತ್ತೇವೆ ಎಂದು ಹೇಳಿಲ್ಲ. ಇದರ ಬಗ್ಗೆ ಒಂದೆ ಒಂದು ಚಕಾರ ಶಬ್ದ ಕೂಡ ಎತ್ತುವುದಿಲ್ಲ. ಇದರ ಬಗ್ಗೆ ಚಕಾರ ಶಬ್ದವನ್ನು ಎತ್ತಲಿಲ್ಲ. ಸ್ಟಾಂಪ್ ಡ್ಯೂಟಿ ಬಗ್ಗೆ ಕನ್‌ಸೇಷನ್ ಕೇಳಿದ್ದೆವು. ತಾವು ಅದರ ಬಗ್ಗೆಯೂ ಏನು ಹೇಳಲಿಲ್ಲ. ಆದ್ದರಿಂದ ಈ ನಾಲ್ಕಾರು ವಿಚಾರಗಳನ್ನು ಏನು ಪ್ರಸ್ತಾಪ ಮಾಡಿದ್ದೇವೆ ತಾವು ದಯವಿಟ್ಟು ಅವುಗಳನ್ನು ಹೇಳಬೇಕಾಗುತ್ತದೆ. ಇಲ್ಲಿ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುವ ಬಗ್ಗೆಯೂ ತಾವು ಪ್ರಸ್ತಾಪ ಮಾಡಲಿಲ್ಲ. ಬಹಳ ಮುಖ್ಯವಾಗಿ ಕೊನೆಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ತಾವು 2-3 ಸಮಿತಿಗಳನ್ನು ರಚನೆ ಮಾಡಿದ್ದೀರಿ. ಒಂದು ಸಮಿತಿಯನ್ನು ಈಗಾಗಲೇ ಅನೌನ್ಸ್ ಮಾಡಿದ್ದೀರಿ. ಇನ್ನೊಂದನ್ನು ಮಾಡಬೇಕು. ಈ ಸಮಿತಿಗಳಲ್ಲಿ ಡೆಲಿಬರೇಟ್ಲಿ ವಿರೋಧಪಕ್ಷಗಳನ್ನು ಏತಕ್ಕೆ ಹೊರಗೆ ಇಟ್ಟಿದ್ದೀರಿ ಎನ್ನುವ ಪ್ರಶ್ನೆಯನ್ನು ಕೇಳಿದರೆ ತಾವು ಏನಾದರೂ ಉತ್ತರವನ್ನು ಹೇಳುತ್ತೀರಾ ಎಂದು ನಾನು ಕೇಳುತ್ತಿದ್ದೇನೆ. ವಿರೋಧ ಪಕ್ಷಗಳನ್ನು ಏತಕ್ಕೆ ಈ ಸಮಿತಿಗಳಿಂದ ಹೊರಗಿಟ್ಟಿದ್ದೀರೆಂದು ಕೇಳುತ್ತಿದ್ದೇನೆ. ತಾವು ದಯವಿಟ್ಟು ಪಕ್ಷ ಬೇಧವಿಲ್ಲದೆ ನಾವು ಎಲ್ಲರನ್ನು ಸೇರಿಸಿದ್ದೇವೆಂದು ಇಲ್ಲಿ ಉದ್ಘೋಷಣೆ ಮಾಡಿಬಿಟ್ಟಿರಿ. ಉದ್ಘೋಷ ಮಾಡುವಾಗ ಚರ್ಚೆಯ ಕಾಲಕ್ಕೆ ನಮ್ಮನ್ನು ಕರೆಯುವುದಿಲ್ಲ. ಸಮಿತಿಯ ರಚನೆಯನ್ನು ಮಾಡುವಾಗಲೂ ನಮ್ಮನ್ನು ಕರೆಯುವುದಿಲ್ಲ. ಕೊನೆ ಪಕ್ಷ ಮುಂದೆ ಅನೌನ್ಸ್ ಮಾಡತಕ್ಕಂಥ ಸಮಿತಿಗಳಲ್ಲಿ ನಮ್ಮ ಜೊತೆಯಲ್ಲಿ ಸಮಾಲೋಚನೆಯನ್ನು ಮಾಡುತ್ತೇವೆಂದೂ ಕೂಡ ಹೇಳುವುದಿಲ್ಲ. ಆದ್ದರಿಂದ ಇದು ಒಟ್ಟಾರೆ ನೀವು ಸದನವನ್ನು ಕಾನ್‌ಫಿಡೆನ್ಸ್‌ನಲ್ಲಿ ಇಟ್ಟುಕೊಂಡು ಮಾಡಿದ್ದಲ್ಲ ಎನ್ನುವ ಕಾರಣಕ್ಕಾಗಿ ಇದು ನಿಮ್ಮ ಒಂದು ಚುನಾವಣೆಯ ಪ್ರಣಾಳಿಕೆ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ಇಷ್ಟು ಮಾತನ್ನು ಹೇಳಿದ್ದಕ್ಕೆ ತಮ್ಮಿಂದ ಉತ್ತರ ಬರುತ್ತದೆಂದು ನಿರೀಕ್ಷೆ ಮಾಡುತ್ತೇನೆ.

\+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಸಭಾಧ್ಯಕ್ಷರೇ ರಾಜ್ಯದ ರೈತಾಪಿ ಜನರಿಗೆ ಅನುಕೂಲವಾಗುವಂಥ ಕೆಲಸವನ್ನು ಮಾಡುತ್ತೇವೆನ್ನುವಂಥ ಭರವಸೆ ಇದರಲ್ಲಿ ಇದೆಯೇ ವಿನಹ ಮತ್ತೇನು ಇಲ್ಲ. ಈ ರಾಜ್ಯದ ರೈತರು ಇದೇ 27ನೇ ತಾರೀಖಿನ್ನು ಕಾಯುತ್ತಿದ್ದರು. ಏನೋ ನಮ್ಮ ನೆರವಿಗೆ ಈ ಸರ್ಕಾರ ಬರಬಹುದು, ನಾವು ನೆಮ್ಮದಿಯಿಂದ ಇರಬಹುದೆಂದು ನಿರೀಕ್ಷೆ ಮಾಡುತ್ತಿದ್ದರು. ನಾನು ಸನ್ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳನ್ನು ವಿನಂತಿ

ಮಾಡಿಕೊಂಡು ಒತ್ತಾಯ ಮಾಡುವಂಥದ್ದೇನೆಂದರೆ ತಾವು ಏನು ಪ್ರಧಾನಿಯವರಿಗೆ ಹಿಂದೆ ಪತ್ರ ಬರೆದ ಬಗ್ಗೆ ಒಂದು ಮಾತನ್ನು ಹೇಳಿದ್ದೀರಿ. ಆಣೆವಾರಿ ಪದ್ಧತಿಯಿಂದ ರೈತನ ಸಾಲ ಮನ್ನಾ ಒಂದು ಯೋಜನೆ ಈ ಕಂಡೀಷನ್‌ನಿಂದ ಅನುಕೂಲವಾಗುವುದಿಲ್ಲ, ಅದನ್ನು ರದ್ದು ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ ಎನ್ನುವ ಮಾತನ್ನು ಈ ಸದನದಲ್ಲಿ ಪದೇ ಪದೇ ಹೇಳಿದ್ದೀರಿ. ಪತ್ರದ ಮೂಲಕ ತಾವು ತಿಳಿಸಿದ್ದೀರಿ ಎನ್ನುವ ಮಾತನ್ನು ಹೇಳಿದ್ದೀರಿ. ಕೇಂದ್ರ ಸರ್ಕಾರದಲ್ಲಿ ಜನ ಆರಿಸಿ ತಂದ ಸರ್ಕಾರ ಬರುತ್ತದೆ. ತಾವು ಮಾಡಿದಂಥ ಸ್ಟೇಟ್‌ಮೆಂಟ್ ಕಾಪಿಯನ್ನು ಕೂಡ ಕೊಟ್ಟಿಲ್ಲ, ಪರವಾಗಿಲ್ಲ, ಅದರಲ್ಲಿ ಏನಾದರೂ ಈ ಅರ್ಥ ಬರುತ್ತದೆಯೇ ಎನ್ನುವುದು. ಇವತ್ತು ಆಣೆವಾರು ಪದ್ಧತಿಯಿಂದ ಕೇಂದ್ರ ಸರ್ಕಾರದ 10 ಸಾವಿರದವರೆಗೆ ಈ ಸಾಲ ಮನ್ನಾ ಯೋಜನೆಯಿಂದ ರೈತರಿಗೆ ಅನುಕೂಲವಾಗುವುದಿಲ್ಲ, ಅದಕ್ಕೋಸ್ಕರ ಆಣೆವಾರಿ ಪದ್ಧತಿಯನ್ನು ಕೈಬಿಡಿ ಎಂದು ಕೇಂದರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. ಕೇಂದ್ರ ಸರ್ಕಾರ ಅದನ್ನು ಒಪ್ಪದಿದ್ದರೂ ಸಹ ನಮ್ಮ ರಾಜ್ಯ ಸರ್ಕಾರ ಅಣೆವಾರಿಯನ್ನು ಯಾವುದೇ ಕಾರಣಕ್ಕೂ ಒತ್ತಾಯ ಮಾಡದೆ 10 ಸಾವಿರದ ವರ್ಗದವರೆಗೆ ಬರುವ ಎಲ್ಲಾ ರೈತರ ಸಾಲವನ್ನು ನಮ್ಮ ರಾಜ್ಯ ಸರ್ಕಾರ ಮನ್ನಾ ಮಾಡುತ್ತದೆ ಎನ್ನುವ ಭರವಸೆಯನ್ನು ಕೊಟ್ಟರೆ, ನಮ್ಮ ರಾಜ್ಯದ ರೈತ ನಮ್ಮ ಕಡೆ ನೋಡುತ್ತಿರುವುದಕ್ಕೆ ಒಂದು ಒಳ್ಳೆಯ ಕೆಲಸ ಮಾಡಿದಂತಾಗುತ್ತದೆ. ಇದಕ್ಕೆ ನಾವು ರೈತರ ಪರವಾಗಿ ಧನ್ಯವಾದಗಳನ್ನು ಅರ್ಪಿಸುವುದಕ್ಕೆ ಸಿದ್ಧರಾಗಿದ್ದೇವೆ. ಆದರೆ ಈ ಒಂದು ಹೇಳಿಕೆಯಲ್ಲಿ ಕೇವಲ ಬೇರೆ ಬೇರೆ ಎಲ್ಲಾ ಸಂಗತಿಗಳನ್ನು ಹೇಳುತ್ತಾ ಬಂದಿದ್ದೀರಿ. ಇಡೀ ರಾಜ್ಯದ ರೈತ ಸಮೂಹ ಅನೇಕ ವರ್ಷಗಳಿಂದ ಸಾಲಗಾರರ ಮಕ್ಕಳನ್ನಾಗಿ ಮಾಡಿ ಭಿಕ್ಷೆಯನ್ನು ಎತ್ತಿ ಅಲೆಯುತ್ತಿದ್ದರೂ ಅಂಥವರಿಗೆ ಏನೋ ಒಂದು ನೆರವು ಸಿಗಬಹುದೆಂದು ಹೇಳಿ ಭರವಸೆಯಿಂದ ಈ ದಿನವನ್ನು ಕಾಯುತ್ತಿದ್ದರೂ ಅವನಿಗೆ ಅನುಕೂಲವಾಗುವಂಥ, ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಏನು ಒಂದು ಮಾತನ್ನು ತಾವು ಹೇಳಲಿಲ್ಲ, ಅವನಿಗೆ ಅಪಾರ್ಥವಾಗಬಹುದು. ನಾಳೆ ಪತ್ರಿಕೆಯಲ್ಲಿ ಬಂದ ತಕ್ಷಣ ಏನು ಅರ್ಥ ಬರುತ್ತದೆಂದರೆ ಅಣೆವಾರು ಹೇಳಿದಂಥ ಸಾಲ ಮನ್ನಾ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ಕಳುಹಿಸುತ್ತೀರಿ, ನಾಳೆ ಕೇಂದ್ರ ಸರ್ಕಾರದಿಂದ ಏನು ಬರುತ್ತದೆ ತಾವು ಅದನ್ನೇ ಮಾಡುತ್ತೀರಿ. ಆದ್ದರಿಂದ ತಮ್ಮಲ್ಲಿ ಒತ್ತಾಯ ಮಾಡಿ ವಿನಂತಿ ಮಾಡುತ್ತೇನೆ. ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಇದು ಯಡಿಯೂರಪ್ಪನ ಪ್ರಶ್ನೆಯಲ್ಲ. ಇವತ್ತು ಎಲ್ಲಾ ಮಾನ್ಯ ಸದಸ್ಯರ ಒಕ್ಕೊರಲಿನ ಅಭಿಪ್ರಾಯ ಏನಿದೆ ಅದರ ಬಗ್ಗೆ ತಾವು ದಯವಿಟ್ಟು ಈಗಲಾದರೂ ಯೋಚನೆ ಮಾಡಿ ರೈತನ ಆಣೆವಾರು ಪದ್ಧತಿಯನ್ನು ಖಂಡಿತವಾಗಿಯೂ ತೆಗೆದುಹಾಕಬೇಕು. ಹತ್ತು ಸಾವಿರದವರೆಗೆ ಸಾಲ ಮನ್ನಾ ಮಾಡಲು ಕೇಂದ್ರ ಸರ್ಕಾರಕ್ಕೆ ಏನು ಕಳುಹಿಸಿದ್ದೀರಿ ಅದನ್ನು ಅವರು ಒಪ್ಪದಿದ್ದರೂ ರಾಜ್ಯ ಸರ್ಕಾರ ಆ ಭಾರವನ್ನು ಒಪ್ಪಿಕೊಂಡು ರಾಜ್ಯದಲ್ಲಿರುವ ಹತ್ತು ಸಾವಿರದವರೆಗೆ ಎಲ್ಲಾ ರೈತರ ಸಾಲ ಮನ್ನಾ ಮಾಡುತ್ತೇವೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳದಿದ್ದರೆ ಈ ಒಂದು ಹೇಳಿಕೆಯಲ್ಲಿ ಯಾವುದೇ ತಿರುಳಿಲ್ಲವೆಂದು ಹೇಳಿ, ಈ ರಾಜ್ಯದ ರೈತರಿಗೆ ತಾವು ಮೋಸ ಮಾಡಿದಂತಾಗುತ್ತದೆಂದು ಹೇಳಬೇಕಾಗುತ್ತದೆ. ನಿಜಕ್ಕೂ ಒಳ್ಳೆಯ ಹೆಸರು ನಿಮಗೆ ಬರುವುದಿಲ್ಲ, ಅದಕ್ಕೋಸ್ಕರ ಮೊಸಳೆ ಕಣ್ಣೀರು ಸುರಿಸುವಂಥ ಈ ಪದ್ಧತಿಯನ್ನು ಬಿಟ್ಟು ರಾಜ್ಯದ ರೈತರ ಒಂದೇ ಒಂದು ಕೇಂದ್ರ ಬಿಂದುವಾಗಿರುವಂಥ ಸಮಸ್ಯೆಯ ಬಗ್ಗೆ ತಾವು ಹೆಚ್ಚಿನ ಗಮನಹರಿಸಬೇಕು. ಸ್ವಾತಂತ್ರ ಬಂದು 43 ವರ್ಷಗಳೇ ಆಯಿತು....

ಅಧ್ಯಕ್ಷರು : ತಾವು ಕ್ಲಾರಿಫಿಕೇಷನ್ ಕೇಳಿ. ನಿಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೀರಿ. ಅವರ ಸ್ಟೇಟ್‌ಮೆಂಟ್ ನಿಮಗೆ ಹಿಡಿಸಬಹುದು ಹಿಡಿಸದೆ ಇರಬಹುದು. ಕ್ಲಾರಿಫಿಕೇಷನ್ ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವತ್ತು ಹತ್ತು ಸಾವಿರದವರೆಗೆ ರೈತರ ಸಾಲ ಮನ್ನ ಮಾಡಬೇಕೆನ್ನುವ ಒತ್ತಾಯವನ್ನಿಟ್ಟು ಇದರಿಂದ ರೈತರಿಗೆ ಉಪಯೋಗವಾಗುವಂಥ ಹೇಳಿಕೆಯನ್ನು ಕೊಡಬೇಕೆಂದು ಹೇಳುತ್ತೇನೆ.

1.40 ಪಿ.ಎಂ.

(ಗೊಂದಲ)

Mr. SPEAKER : I call Sri Shivaram Gowda to orrder. He cannot just intervene in a light - hearted manner. Your behaviour is bothering of irresponsibility. The House is concerned with a very serious issue.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆ ಮೇಲೆ ನಾನು ಐದಾರು ವಿಷಯಗಳ ಬಗ್ಗೆ ಸ್ಪಷ್ಟೀಕರಣ ಕೇಳಬೇಕಾಗಿದೆ. ಉಳಿದದ್ದನ್ನು ಸ್ವಾಗತಿಸುತ್ತೇನೆ. ಸೆಕ್ಷನ್ 101(ಇ) ಏನು ರದ್ದಾಯಿತು. ಅದಕ್ಕೆ ನಮ್ಮ ಸ್ವಾಗತ ಇಧೆ. ಅದನ್ನು ತಾವು ಮಾಡಿದಾಗಲೇ ಕಬ್ಬನ್ ಪಾರ್ಕ್‌ನಲ್ಲಿ ಸುಟ್ಟು ಹಾಕಿದ್ದಾರೆ. ಸುಮ್ಮನೆ ಮಾಡಬೇಕೆಂದು ಮಾಡುತ್ತೀದ್ದೀರಿ. ಆದರೆ ಸೆಕ್ಷನ್ 161 ಮತ್ತು 163 ಏನಿದೆ ಇದರಲ್ಲಿ ಏತಕ್ಕೆ ಹತ್ತು ಸಾವಿರ ರೂಪಾಯಿವರೆಗೆ ಎಂದು ಒಂದು ಷರತ್ತು ಹಾಕಿ ತಿದ್ದುಪಡಿ ಮಾಡುತ್ತೇವೆಂದು ಹೇಳುತ್ತಿದ್ದೀರೆಂದು ಅರ್ಥವಾಗುತ್ತಿಲ್ಲ. ಲ್ಯಾಂಡ್ ರೆವಿನ್ಯೂ ಆಕ್ಟಿನ 163ನೇ ಸೆಕ್ಷನ್ ಅನ್ನು ನಾನು ಈ ಸಂದರ್ಭದಲ್ಲಿ ಓದಬಯಸುತ್ತೇನೆ.

".... Provides for forfeiture of the entire occupancy of the land...." ' Entire occupancy of the land'

ಇದೇ ಲ್ಯಾಂಡ್ ರೆವಿನ್ಯೂ ಆಕ್ಟಿನಲ್ಲಿ, ಸಿವಿಲ್ ಪ್ರೊಸೀಜರ್ ಕೋಡಿನಲ್ಲಿ ಯಾವ ಪ್ರೊಸೀಜರಲ್ ಲಾ ಇದೆ. ಅದೇ ಪ್ರೊಸೀಜರ್ ಲಾ ಬರುವುದಕ್ಕಾಗುವುದಿಲ್ಲ. ಆದರೆ ಇಲ್ಲಿ ಇದೆ ಆಮೇಲೆ ಅಟಾಚ್‌ಮೆಂಟ್ ಅಂಡ್ ಸೇಲ್ ಬಂದಾಗ ಬೇರೆ ವರ್ಗಕ್ಕೆ ಏನು ಕಾನೂನು ಇದೆ ಅದೇ ಕಾನೂನು ಇವರಿಗೂ ಇದೆ. Attachment and sale must be as far as possible equivalent to the money that is due. ಆದರೆ ಇಲ್ಲಿ ಹತ್ತು ಸಾವಿರ ರೂಪಾಯಿ ಬಾಕಿ ಇದ್ದರೂ, the entire occupancy can be forfeited. ಎಂದು ಹೇಳುತ್ತಾರೆ. ತಮಗೆ ಗೊತ್ತಿರುವ ಹಾಗೆ ತಮ್ಮ ಜಿಲ್ಲೆಯಲ್ಲಿ ಒಂದು ಗುಂಟೆ ಭೂಮಿಗೆ 2ರಿಂದ 3 ಸಾವಿರ ರೂಪಾಯಿಗಳವರೆಗೆ ಇದೆ. ಹತ್ತು ಸಾವಿರ ರೂಪಾಯಿ ಬಾಕಿ ಇದ್ದರೆ ಹತ್ತು ಎಕರ್ ಅಕ್ಯುಪೆನ್ಸಿ ರೈಟನ್ನು ಫೋರ್‌ಪಿಟ್ ಮಾಡಿಕೊಳ್ಳುವ ಪ್ರಾವಿಜನ್ ಇದೆ. It violates directly not only Article 21 of the Constitution, but also Article 14 of the Constitution, because it has prescribed a different procedural law for me. ಎಂದು ಏನು ಯೋಚನೆ ಮಾಡಿದ್ದೀರಿ ಮತ್ತು ಹತ್ತು ಸಾವಿರ ರೂಪಾಯಿ ಕಂಡೀಷನ್ ಮೇಲೆ ಸೆಕ್ಷನ್ 161 ಮತ್ತು 163ನ್ನು ಜಾರಿಗೆ ತರುವುದಿಲ್ಲವೆಂದು ಏನು ಹೇಳಿದ್ದೀರಿ ಆದರಿಂದ ಏನೂ ಉಪಯೋಗವಾಗುವುದಿಲ್ಲ. ಹತ್ತು ಸಾವಿರ ರೂಪಾಯಿ ಬಾಕಿ ಇದ್ದರೆ ಹತ್ತು ಎಕರೆ ಅಕ್ಯುಪೆನ್ಸಿ ಫೋರ್‌ಪೀಟ್ ಮಾಡಿಕೊಳ್ಳುವ ಪ್ರಾವಿಷನ್ ಇಟ್ಟುಕೊಂಡು ರೈತರ ಪರವಾಗಿ ನಿಲುವನ್ನು ತೆಗೆದುಕೊಂಡಿದ್ದೇವೆಂದರೆ ರೈತರು ಒಪ್ಪುವುದಿಲ್ಲ. ರೈತರೇನು ಅಷ್ಟು ದಡ್ಡರಲ್ಲ. ಚಾಲ್ತಿ ಸಾಲ ಎಂಬುದರ ಬಗ್ಗೆ ತಮ್ಮ ಕಲ್ಪನೆ ಏನಿದೆ? ಅನ್‌ಕಂಡೀಷನಲ್ ಆಗಿ ಸಾಲ ರದ್ದಾಗಬೇಕೆಂದು ತಮ್ಮ ನಿಲುವಾದರೆ ಸಂತೋಷ. ಆದರೆ ಅಣೆವಾರಿ ಬಗ್ಗೆ ಮುಖ್ಯಮಂತ್ರಿಗಳು ಮಾತನಾಡಿದರು. ಅಂದಾಗ ಚಾಲ್ತಿ ಸಾಲ ಎಂದರೆ ತಮ್ಮ ಕಲ್ಪನೆ

ಏನು? ನಮ್ಮ ವಿಚಾರ ಏನೆಂದರೆ ಚಾಲ್ತಿ ಸಾಲ ಎಂಬುದು ರೈತರಿಗೆ ಇಲ್ಲ. ತಾತನ ಕಾಲದಿಂದ ಇರುವ ಸಾಲ ಇದೆ. ಎಲ್ಲಾ ನವೀಕೃತ ಸಾಲಗಳು. ನನಗೆ ಹತ್ತು ಸಾವಿರ ರೂಪಾಯಿ ಸಾಲ ಇದೆ ಎಂದರೆ, ಸೊಸೈಟಿಯವರು 15 ಸಾವಿರ ರೂಪಾಯಿ ಸಾಲ ಮಂಜೂರು ಮಾಡಿದಾಗ 10 ಸಾವಿರ ರೂಪಾಯಿಗಳನ್ನು ಮುರಿದುಕೊಂಡು 5 ಸಾವಿರ ರೂಪಾಯಿಗಳನ್ನು ಕೈಗೆ ಕೊಡುತ್ತಾರೆ. ಇದನ್ನು ಚಾಲ್ತಿ ಸಾಲ ಎನ್ನುತ್ತೀರಾ? ಹಳೇ ಸಾಲ ಅನ್ನುತ್ತೀರಾ? ಆದ್ದರಿಂದ ಚಾಲ್ತಿ ಸಾಲ ಎಂಬುದರ ಬಗ್ಗೆ ಸರ್ಕಾರದ ಕಲ್ಪನೆ ಏನು ಇದೆ? ಇದರ ಬಗ್ಗೆ ಸ್ಪಷ್ಟೀಕರಣ ಬೇಕು. ನಾವು ಅಣೆವಾರಿ ಕಾಲದಲ್ಲಿ ಇಲ್ಲ. ನೀವು ತಪ್ಪು ಮಾಡಿದ್ದೀರಿ. ಇದರಿಂದ ರೈತರ ಸಾಲ ಮನ್ನಾ ಯೋಜನೆಯಿಂದ ಹೊರಗೆ ಇರಬೇಕಾಗಿದೆ. ಬರಗಾಲ ಜಿಲ್ಲೆಗಳು ಏನಿವೆ ಅಲ್ಲಿ ವಿದ್ಯುಚ್ಛಕ್ತಿ ಉಪಯೋಗಿಸದೆ ಇದ್ದರೂ ವಿದ್ಯುತ್ ದರವನ್ನು ಮತ್ತು ಆದರ ಮೇಲಿನ ಬಡ್ಡಿಯನ್ನು ಹಾಕಿದ್ದೀರಿ. 10-15 ಸಾವಿರ ರೂಪಾಯಿ ಬಿಲ್ ಬಂದಿದೆ. ಇದನ್ನು ಕೇಳಿದ್ದೇವೆ. ಇದರ ಬಗ್ಗೆ ಸರ್ಕಾರ ಏನೂ ಹೇಳಿಲ್ಲ.

ಮತ್ತೆ ನೀರಾವರಿ ಪ್ರದೇಶದ ಜೌಗು ಪ್ರದೇಶದಲ್ಲಿ ನಾವು ಜೌಗಿನಲ್ಲಿ ಯಾವ ಬೆಳೆ ಬೆಳೆಯಬೇಕೋ ಅದನ್ನು ಬೆಳೆದಿದ್ದೇವೆ. ನೀವು ಅದನ್ನು ಕ್ರಾಫ್ ಪ್ಯಾಟರ್ನ್ ವಯಲೇಷನ್ ಎಂದು ಹೇಳಬಹುದು. ಆದರೆ ನನಗೆ ಗೊತ್ತು ನನ್ನ ಭೂಮಿಯಲ್ಲಿ ಜೌಗಾಗಿರುವಾಗ ಯಾವ ಬೆಳೆ ಬೆಳೆಯಬೇಕು ಎಂದು. ಅವರು ಜೌಗು ಇರುವ ಕಡೆ ಶೇಂಗಾ ಬೆಳಿ ಎಂದು ಹೇಳುತ್ತಾರೆ. ನಾನು ಎಲ್ಲಿ ಬೆಳೆಯಲಿ? ಭತ್ತ ಬೆಳೆಯಬೇಕು. ಭತ್ತ ಒಂದೇ ಬೆಳೆಯುತ್ತೇನೆ. ಅಂಥ ಕಡೆ ಪೀನಲ್ ವಾಟರ್ ರೇಟ್ ಎಂದು ಏನು ಹಾಕಿದ್ದೀರಿ Penal water rate and interest on penal water rate ಇದನ್ನು ಏನು ಮಾಡಿದ್ದೀರಿ ಎಂಬ ಬಗ್ಗೆ ಸರ್ಕಾರದ ನಿಲುವು ಏನು? ಈ ನಾಲ್ಕು ಅಂಶಗಳ ಬಗ್ಗೆ ನಾನು ಸ್ಪಷ್ಟೀಕರಣ ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ: ಮೊದಲು ನಾನು ಅದಕ್ಕೆ ಉತ್ತರ ಕೊಟ್ಟರೆ..

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಯಾವ ಭಂಗಗಳೂ ಇಲ್ಲದೆ ಮೊದಲು 10 ಸಾವಿರ ರೂಪಾಯಿವರೆಗೂ ವಜಾ ಆಗಬೇಕು ಎಂಬುದರಲ್ಲಿ ಬಹುಶಃ ಸದನದಲ್ಲಿ ಇದಕ್ಕೆ ವಿರೋಧ ಇಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತಾ ನಾನೂ ಸಹ ವಜಾ ಆಗಬೇಕೆಂಬ ಮಾತನ್ನು ಹೇಳುತ್ತೇನೆ. ಇಲ್ಲಿ ನನ್ನದೇ ಒಂದು ಪ್ರಶ್ನೆ ಇದೆ ಮಾನ್ಯ ಅಧ್ಯಕ್ಷರೆ ಅದು ವಿದ್ಯುಚ್ಛಕ್ತಿ ಬಗ್ಗೆ. ಅದನ್ನು ಇಲ್ಲಿ ಉಲ್ಲೇಖ ಮಾಡುವುದು ಸೂಕ್ತ ಎಂದು ಭಾವಿಸಿದ್ದೇನೆ. ಇದು ಪ್ರಶ್ನೆ ಸಂಖ್ಯೆ: 1196. ದಿನಾಂಕ 1-11-1990ರಲ್ಲಿ ರಾಜ್ಯದಲ್ಲಿ 6,51,537 ಐ.ಪಿ. ಸೆಟ್‌ಗಳಿವೆ. ಇದರಲ್ಲಿ ಮುಖ್ಯವಾಗಿರತಕ್ಕದ್ದು ಏನು ಎಂದರೆ ಅದನ್ನು ಮಾತ್ರ ಓದುವುಕ್ಕೆ ಇಷ್ಟಪಡುತ್ತೇನೆ.

ಅದ್ಯಕ್ಷರು: ಇವರು 65 ಸಾವಿರ ಎಂದು ಹೇಳಿದ್ದಾರೆ. ಅದರ ಬಗ್ಗೆ ಹೇಳಿ. ಒಟ್ಟು ಚರ್ಚೆ ಮಾಡುವುದಕ್ಕೆ ಈಗ ಆಗುವುದಿಲ್ಲ. 6 ಲಕ್ಷಕ್ಕೂ 65 ಸಾವಿರಕ್ಕೂ ಎಲ್ಲಿಯ ಸಂಬಂಧ? ಈ ಹೇಳಿಕೆಯಿಂದ ನಿಮ್ಮ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ರೈತ ಕರೆಂಟ್‌ನ್ನು ಉಪಯೋಗಿಸದೇ ಇದ್ದರೂ ರೈತನ ತಲೆ ಮೇಲೆ ಹಾಕಿರುವುದಕ್ಕೆ ಸರ್ಕಾರದವರೇ ಉತ್ತರ ಕೊಟ್ಟಿದ್ದಾರೆ. ಬಾಕಿ ಇರತಕ್ಕದ್ದು ಎಷ್ಟು ಎಂದರರೆ, 1,20,254 ಐ.ಪಿ. ಸೆಟ್‌ಗಳು ಚಾಲನೆಯಲ್ಲಿ ಇಲ್ಲ. ಅವು ಕೆಲಸ ಮಾಡುತ್ತಿಲ್ಲ. ಆದರೂ ಕೂಡ ಅದರ ಮೇಲೆ ವಿಧಿಸಿರತಕ್ಕ ಚಾರ್ಜ್ ಎಷ್ಟು ಎಂದರೆ 12.03 ಕೋಟಿ ರೂಪಾಯಿನಷ್ಟು ಹಣ ರೈತರಿಂದ ಬರಬೇಕಾಗಿದೆ. ಇದು ಅವರೇ ಕೊಟ್ಟಿರತಕ್ಕ ಅಂಕಿ ಅಂಶ. ಇದನ್ನು ಒಪ್ಪಿಕೊಂಡಿದ್ದಾರೆ. ಹೌದು, ಇದು ಚಾಲನೆಯಲ್ಲಿ ಇಲ್ಲ, ಆದರೂ ಇಷ್ಟು ಹಣ ಇದರಿಂದ ಬರಬೇಕಾದರೆ

ಎಂಬ ಮಾತನ್ನು ಇವತ್ತು ಸರ್ಕಾರದವರು ಹೇಳುತ್ತಿದ್ದಾರೆ. ಇದರಿಂದ 12.03 ಕೋಟಿ ರೂಪಾಯಿ ಏನಿದೆ ಇದನ್ನು ವಜಾ ಮಾಡತಕ್ಕದ್ದು. ಕೊನೆಯಲ್ಲಿ ಉತ್ತರ ಏನು ಹೇಳುತ್ತಿದ್ದಾರೆ ಎಂದರೆ 'It is not permissible to waive off the levy of interest.. ಎಂದು ಹೇಳುತ್ತಾರೆ. ಆದ್ದರಿಂದ ಇದನ್ನು ವಜಾ ಮಾಡತಕ್ಕದ್ದು ಸೂಕ್ತ ಇದೆ. ಅದಕ್ಕೆ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಈಗ ಸ್ಟೇಟ್‌ಮೆಂಟ್ ಮಾಡುತ್ತಾ 2-3 ವಿಷಯಗಳ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಕೆಲವು ಕ್ಲಾರಿಫಿಕೇಷನ್‌ಗಳನ್ನು ಕೇಳುತ್ತಿದ್ದೇನೆ. ನಮ್ಮ ಹಳ್ಳಿಗಳ ಕಡೆ ಒಂದು ಗಾದೆ ಇದೆ. 'ಕೋಮಟಿ ಕೊಡ, ಜೈನ ಬಿಡ' ಎಂದು. ಕೋಮಟಿ ಕೊಡುವುದಿಲ್ಲ, ಜೈನರವನು ಬಿಡುವುದಿಲ್ಲ ಎಂದು.

ಅಧ್ಯಕ್ಷರು: ಯಾರು ಹೇಳಿ

ಶ್ರೀ ಆರ್.ಎಲ್. ಜಾಲಪ್ಪ: ಕೋಮಟಿ ಕೊಡುವುದಿಲ್ಲ, ಜೈನರವನು ವಸೂಲಿ ಮಾಡದೆ ಬಿಡುವುದಿಲ್ಲ ಎಂದು. ಸ್ವಾಮಿ, ತಾವು ಹೇಳಿದಿರಿ, 10 ಸಾವಿರ ರೂಪಾಯಿವರೆಗೆ ಕೇಂದ್ರ ಸರ್ಕಾರದವರು ಯಾವುದೇ ಕಂಡೀಷನ್ ಇಲ್ಲದೆ ಒಪ್ಪಿಕೊಂಡರೆ ಅದನ್ನು ಕೊಡುತ್ತೀವೆಂದು ತಮಗೆ ಡೆಫನೆಟ್ಟಾಗಿ ಗೊತ್ತಿದೆ. ಇದು ಸಾಧ್ಯವಿಲ್ಲದ ಕೆಲಸ ಈಗ ಎಂದು. ತಮಗೂ ಅದೂ ಗೊತ್ತಿದೆ. ತಾವು ಧೈರ್ಯ ಮಾಡಿ, ಅವರು ಕೊಟ್ಟರೆ ಕೊಡಲಿ, ಕೊಡದಿದ್ದರೆ ಹೋಗಲಿ ನಾನು ವೇವ್ ಮಾಡುತ್ತೇನೆ ಎಂದು ಹೇಳಿ. ತಮ್ಮ ಫೈನಾನ್ಸ್ ಅದಕ್ಕೆ ಪರ್ಮಿಟ್ ಮಾಡುತ್ತದೆಯೆ? ಇದನ್ನು ತಾವು ಹೇಳುತ್ತೀರಾ? ಇವತ್ತಿನ ತಮ್ಮ ಉತ್ತರದಿಂದ ಯಾರಿಗೋ ಸಮಾಧಾನ ಆಗಬಹುದು ಅಷ್ಟೆ. ರೈತರಂತೂ ಸಮಾದಾನವಾಗುವುದಿಲ್ಲ. ಸ್ಪೆಸಿಫಿಕ್ಕಾಗಿ ಯಾವುದಾದರೊಂದು ಹೇಳಿ. ಇನ್ನೊಂದು ಮಾತು ಹೇಳಿದಿರಿ ನೀವು. ಯಾವುದೇ ಕಾರಣದಿಂದ ಸಾಲ ವಸೂಲಾತಿಯನ್ನು ಕೋಯೆರ್ಸಿವ್ ಮೆಥಡ್‌ನಲ್ಲಿ ಮಾಡುವುದಿಲ್ಲ ಎಂದು.

Mr. SPEAKER: He has understood the whole point. The Whole House has understood the point.

ಶ್ರೀ ಆರ್.ಎಲ್ ಜಾಲಪ್ಪ: ಅದು ಬಿಟ್ಟಿದ್ದೇನೆ. ಸಾಲ ವಸೂಲು ಮಾಡುವುದಿಲ್ಲ ಎಂದು ಹೇಳಿದ್ದೀರಿ. ತೊಂದರೆ ಯಾರಿಗಾಗುತ್ತದೆ ಅದರಿಂದ? ಅವನಿಗೆ ವೇವ್ ಆಗುವುದಿಲ್ಲ, ಇನ್ನೊಂದು ಕಡೆ ಅವನ ತಲೆ ಮೇಲೆ ಬಡ್ಡಿ ಏರುತ್ತಾ ಇರುತ್ತದೆ. ರೆಕವರಿ ಆಗುವುದಿಲ್ಲ, 3 ಪರ್ಸೆಂಟ್ ರೆಕವರಿ. ಸ್ಟೇಟ್ ರೂರಲ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಲ್ಲಿ ಬರುವ ತಿಂಗಳು ಸಂಬಳ ಕೊಡುವುದಕ್ಕೆ ಕಾಸಿಲ್ಲ. ಅವರ ಕಥೆ ಏನು ಸ್ವಾಮಿ? ಇದರ ಪ್ರಕಾರ ವೇವ್ ಮಾಡಿರುವುದು 132 ಕೋಟಿ ರೂಪಾಯಿ. ಇದರಲ್ಲಿ 63-64 ಕೋಟಿ ಎರಡು ಬ್ಯಾಂಕಿಗೆ ಕೊಟ್ಟಿದ್ದೀರಿ. ಇನ್ನು 63 ಕೋಟಿ ರೂಪಾಯಿ ಕೊಟ್ಟಿಲ್ಲ ಈಗ ವೇವ್ ಆಗಿರುವುದರೊಳಗೆ.

ಈ ಬ್ಯಾಂಕ್‌ಗಳ ಗತಿ ಏನು? ಮತ್ತು ರೈತರಿಗೆ ಸಾಲ ಸಿಗುತ್ತದೆಯೇ? ಏನು ಆರೇಂಜ್‌ಮೆಂಟ್ ಇದಕ್ಕೆ ಮಾಡಿದ್ದೀರಿ? ನೀವು ಹಣ ಕೊಡದೇ ಇದ್ದರೆ ಎಲಿಜಿಬಿಲಿಟಿ ಬರುವುದಿಲ್ಲ. ಅವರು ನಬಾರ್ಡ್‌ನಿಂದ ಹಣ ಪಡೆಯಲು ಆಗುವುದಿಲ್ಲ. ಆಗ ಅವರು ಎಲ್ಲಿಂದ ಹಣ ಒದಗಿಸುತ್ತಾರೆ? ಮತ್ತೆ ಬ್ಯಾಂಕಿನವರ ಸಂಬಳಕ್ಕೆ ಏನು ವ್ಯವಸ್ಥೆ ಮಾಡಿದ್ದೀರಿ? ಇಂಟರೆಸ್ಟ್ ಸಬ್ಸಿಡಿ ನಾವು 7 ಪರ್ಸೆಂಟ್ ಕೊಡಿ ಎಂದು ಕೇಳಿದ್ದೇವೆ. ಅದರ ಬಗ್ಗೆ ಸ್ಪಷ್ಟೀಕರಣ ಸ್ಪೆಸಿಫಿಕ್ಕಾಗಿ ಕೊಡುತ್ತೀರಾ?

ಶ್ರೀ ಎ.ಬಿ. ಜಕನೂರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ರೈತರ ಹಿತದೃಷ್ಟಿಯಿಂದ ಉತ್ತಮವಾದ, ಉತ್ಕೃಷ್ಟವಾದಂತಹ ನಿರ್ಣಯಗಳನ್ನು

ತೆಗೆದುಕೊಂಡಿರುವುದಕ್ಕೆ ನಾನು ಎಲ್ಲರ ವತಿಯಿಂದ ಅಭಿನಂದಿಸುತ್ತೇನೆ. ಇದಲ್ಲದೇ 100ಕ್ಕೆ 95ರಷ್ಟು ರಿಯಾಯಿತಿ ಕೊಟ್ಟು ಇನ್ನೂ ಒಂದು ಸ್ವಲ್ಪ ರಿಯಾಯಿತಿ ರೈತರಿಗೆ ಉಳಿದಿದೆ. ಇದನ್ನು ಎರಡು ವಾಕ್ಯದಲ್ಲಿ ಹೇಳುತ್ತೇನೆ. ಸಹಕಾರ ಸಂಘಗಳಿಂದ ನಡೆಸತಕ್ಕ ಲಿಫ್ಟ್ ಇರಿಗೇಷನ್‌ಗೆ 1 ವರ್ಷಕ್ಕೆ 1 ಹೆಚ್‌ಪಿಗೆ 250 ರೂಪಾಯಿ ಮಾಡುತ್ತೇವೆಂದು ಮುಖ್ಯಮಂತ್ರಿಗಳು ಹೇಳಿದರು. ಮಾನ್ಯ ಅಧ್ಯಕ್ಷರೇ, ಕೆಲವೊಂದು ಸಹಕಾರ ಸಂಘಗಳು ಏನಿದೆ, ರೈತರು ನಾಲ್ಕು ಜನರಿರಲಿ, 10 ಜನರಿರಲಿ, 20 ಜನರಿರಲಿ ಅವರು ಕೂಡಿ ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ 1960 ಕೆಳಗೆ ರಿಜಿಸ್ಟರ್ ಮಾಡಿ ಲಿಫ್ಟ್ ಇರಿಗೇಷನ್ ಮಾಡುತ್ತಿರುತ್ತಾರೆ. ಅವರು 50 ಹೆಚ್‌ಪಿ, 90 ಹೆಚ್‌ಪಿ ಅಥವಾ 100 ಹೆಚ್‌ಪಿ ವಿದ್ಯುತ್ ಅಳವಡಿಸಿಕೊಂಡಿರುತ್ತಾರೆ. ಅವರಿಗೂ ಈ ರಿಯಾಯಿತಿ ಕೊಡಬೇಕೆಂದು ಹೇಳುತ್ತೇನೆ. ಎರಡನೆಯದಾಗಿ, ರೈತರು ನದಿಯಿಂದ ಹರಿಯತಕ್ಕ ನೀರನ್ನು ಉಪಯೋಗ ಮಾಡಿ ಕೊಂಡು ಬೆಳೆ ಬೆಳೆಯುವುದಕ್ಕೆ ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡು ತಮ್ಮ ಜಮೀನು ನೀರಾವರಿ ಮಾಡಬೇಕೆಂದು ಪ್ರಯತ್ನ ಮಾಡುತ್ತಿರುವಾಗ, ನೀರಾವರಿಗೆ ಪರ್ಮಿಷನ್ ಕೊಡುವುದಕ್ಕೆ ಆಫೀಸರ್ಸ್ ಯಾರು ಇದ್ದಾರೆ ಅವರು ರೈತರಿಗೆ ತ್ರಾಸ ಮಾಡುತ್ತಿದ್ದಾರೆ. ಇವತ್ತು ನೀರಾವರಿಗೆ ಪರ್ಮಿಷನ್ ಅಷ್ಟೇ ಅಲ್ಲ, ಯಾವುದೇ ರೈತ ನದಿಯಿಂದ ಹರಿಯುವ ನೀರನ್ನು ಉಪಯೋಗಿಸಬಹುದು, ಅದಕ್ಕೆ ಟ್ಯಾಕ್ಸ್ ವಗೈರೆ ಹಾಕಬಹುದು, ನೀರಾವರಿಗೆ ಪರ್ಮಿಷನ್ ಕೊಡುವುದು ಏನಿದೆ ಅದನ್ನು ತೆಗೆದುಹಾಕಬೇಕು ಎಂದು ನಾನು ಹೇಳುತ್ತೇನೆ. ಮೂರನೆಯದಾಗಿ, ಎಕ್ಸೆಂಷನ್ ಆಫ್ ಸ್ಟಾಂಪ್ ಡ್ಯೂಟಿ. ಈಗಾಗಲೇ ಸಹಕಾರಿ ಸಂಘಗಳ ಮೂಲಕ ಲಿಫ್ಟ್ ಇರಿಗೇಷನ್ ಸ್ಕೀಮುಗಳು ಏನು ಇವೆ ಅವರಿಗೆ ಸರ್ಕಾರ ಬ್ಲಾಂಕೆಟ್ ಸ್ಟಾಂಪ್ ಡ್ಯೂಟಿ ಏಕ್ಸೆಂಷನ್ ಕೊಟ್ಟಿದೆ. ಆದರೆ ನಾನು ಹೇಳಿದ ಹಾಗೆ, ರೈತರು 10-20 ಜನರು ಇದ್ದರೂ ಅಂತಹ ಒಂದು ಸಂಘ ಮಾಡಿಕೊಂಡು, ತಾನು ಯಾವುದೇ ಬ್ಯಾಂಕಿನಿಂದ ತನ್ನ ಜಮೀನು ಅಡ ಇಟ್ಟು ಯಾವುದೇ ಸಾಲವನ್ನು ತೆಗೆದುಕೊಂಡು ನೀರಾವರಿ ಮಾಡಬೇಕೆಂದಿರುತ್ತಾನೋ ಅಂತಹವನಿಗೂ ಕೂಡಾ ಸ್ಟಾಂಪ್ ಡ್ಯೂಟಿಯಲ್ಲಿ ಎಕ್ಸೆಂಷನ್ ಮಾಡಬೇಕೆಂದು ಕಳಕಳಿಯಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, 10 ಸಾವಿರ ರೂಪಾಯಿ ಸಾಲದ ಬಗ್ಗೆ ಎಲ್ಲರೂ ಹೇಳಿದ್ದಾರೆ. ನಿಮ್ಮ ಸರ್ಕಾರ ವಹಿಸಿಕೊಳ್ಳುವುದಕ್ಕೆ ತೊಂದರೆ ಏನಿದೆ, ಮಿಕ್ಕ ವಿಚಾರಗಳು, ಮೊಕದ್ದಮೆ ತೆಗೆದಿದ್ದರೆ ಬಗ್ಗೆ ತಾವು ಹೇಳಿದ್ದೀರಿ. ಆದರೆ ಇದು ಬಹಳ ಪ್ರಾಮುಖ್ಯವಾದುದು. 27ನೇ ತಾರೀಖು ಮುಖ್ಯಮಂತ್ರಿಯವರಿಂದ ಏನೋ ಬರುತ್ತಾ ಇದೆ, ರೈತರ ಬಗ್ಗೆ ಆಕಾಶವೇ ಕಳಚಿ ಏನೋ ಒಂದು ಒಳ್ಳೆಯದು ಆಗುತ್ತೆದೆ ಎನ್ನುವ ನಿರೀಕ್ಷೆಯಲ್ಲಿ ಅವರು ಇದ್ದರು. ಆದರೆ ಈ ಚುನಾವಣೆ ಇಲ್ಲದೇ ಇದ್ದಿದ್ದರೆ ಇದು ಯಾವುದೂ ಖಂಡಿತಾ ಬರುತ್ತಾ ಇರಲಿಲ್ಲ ಎಂದು ಹೇಳುತ್ತೇನೆ. ಆದ್ದರಿಂದ ಇವತ್ತು ರಾಜ್ಯ ಸರ್ಕಾರ ಧೈರ್ಯದಿಂದ ಯಾವುದೇ ಶರತ್ತು ಇಲ್ಲದೇ ಸಾಲದ ಬಗ್ಗೆ ತನ್ನ ನಿರ್ಧಾರ ತೆಗೆದುಕೊಳ್ಳುತ್ತದೆಂದು ಮುಖ್ಯಮಂತ್ರಿಯವರು ಹೇಳಬೇಕು.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಕಾರಣಗಳನ್ನು ಹೇಳಿದ್ದೇನೆ. 10 ಸಾವಿರ ರೂಪಾಯಿ ಸಾಲದ ವಿಚಾರದಲ್ಲಿ, ಲೋನ್ ವೇವಿಂಗ್ ಸ್ಕೀಮ್ ಪ್ರಕಾರ 50 ಪರ್ಸೆಂಟ್ ಕೇಂದ್ರದವರು 50 ಪರ್ಸೆಂಟ್‌ನ್ನು ನಾವು ವಹಿಸಬೇಕು. ಯಾವ ರೀತಿಯಾಗಿ ಈ ಸಾಲ ವಜಾ ಆಗುತ್ತದೆ, 10 ಸಾವಿರ ರೂಪಾಯಿಯವರೆಗೆ ಎನ್ನತಕ್ಕದ್ದನ್ನು ಕೇಂದ್ರ ಸರ್ಕಾರದವರು ಈ ಹಿಂದೆಯೇ ಮಾಡಿದ್ದಾರೆ. ಈ ಬಗ್ಗೆ ಅವರು ಎಲ್ಲಾ ರಾಜ್ಯ ಸರ್ಕಾರಗಳನ್ನೂ ಈ ಬಗ್ಗೆ ಕನ್ಸಲ್ಟ್ ಮಾಡಿದ್ದಾರೆ.

ನನಗಿಂತ ಹಿಂದೆ ಇದ್ದ ಸರಕಾರ ಕೂಡ ವಿಚಾರವನ್ನು ತಿಳಿಸಿದೆ. ಈ ರಾಷ್ಟ್ರದಲ್ಲಿರತಕ್ಕಂತಹ ಎಲ್ಲಾ ರಾಜ್ಯ ಸರಕಾರಗಳಿಗೂ ಕೇಂದ್ರ ಸರಕಾರ ತಿಳಿಸಿದ ಮೇಲೂ ಕೂಡ ಈ ಕೆಲವು ನಿಬಂಧನೆಗಳನ್ನು ಅವರು ಹಾಕಿ ಬಿಟ್ಟಿದ್ದಾರೆ. ನಾವು ಹಾಕಿರತಕ್ಕಂಥಾದ್ದಲ್ಲ.

ಇವತ್ತು ಚಾಲ್ತಿ ಸಾಲದ ವಿಚಾರ ಇರಬಹುದು ಆಣೆವಾರಿ ಸಾಲದ ವಿಚಾರವಿರಬಹುದು. ಇದು ಇರಬಾರದು ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯವೆಂದು ಮೊದಲಿನಿಂದಲೂ ಹೇಳುತ್ತಿದ್ದೇನೆ. ಈ ಅಭಿಪ್ರಾಯದ ಬಗ್ಗೆ ನಿಮ್ಮಲ್ಲಾಗಲೀ ನಮ್ಮಲ್ಲಾಗಲೀ ವ್ಯತ್ಯಾಸವಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವೇ ಬೆಂಬಲ ಕೊಟ್ಟಂಥ ಸರಕಾರ ಕೇಂದ್ರದಲ್ಲಿದ್ದಾಗ ಪ್ರಧಾನ ಮಂತ್ರಿಯಾಗಿದ್ದಂತಹ ಶ್ರೀ ಚಂದ್ರಶೇಖರ್‌ರವರ ಮನ ಒಲಿಸಬಹುದಿತ್ತು. ಆ ಸಂದರ್ಭದಲ್ಲಿ ದಿನಾಂಕ 2-19-79ರ ಒಂದು ಡಿಫಾಲ್ಟರ್ಸ್ ಕಟ್ ಆಫ್ ಡೇಟ್ ಏನು ಇತ್ತು ಅದನ್ನು ತೆಗೆದು ಎಲ್ಲಾ ರೈತರಿಗೆ ಅನುಕೂಲ ಮಾಡೋಣವೆಂಬ ದಿಸೆಯಲ್ಲಿ ಕೆಲಸ ಮಾಡೋಣ ನಿಯೋಗವನ್ನು ತೆಗೆದುಕೊಂಡು ಹೋಗಲು ಒಂದು ರೆಸಲ್ಯೂಷನ್ ಮಾಡಿ ಎಂದು ಹೇಳಿದ್ದೆವು. ನಿಮ್ಮ ಸರಕಾರ ಬೆಂಬಲ ಕೊಡತಕ್ಕಂತಹ ಪ್ರಧಾನ ಮಂತ್ರಿಗಳನ್ನು ಹಾಗೂ ಮಂತ್ರಿಗಳ ಮನವನ್ನು ಈ ದಿಸೆಯಲ್ಲಿ ತಾವು ಒಲಿಸಬಹುದಾಗಿತ್ತು. ಅದನ್ನು ಮಾಡಲಿಲ್ಲ. ಮುಂದೆ ಅಧಿಕಾರಕ್ಕೆ ಬರುವವರು ಯಾರೋ ಅವರೇ ಮಾಡಲೀ ಎಂದು ಸುಮ್ಮನಿದ್ದೀರಿ. ಆ ಕಾರಣಕ್ಕೋಸ್ಕರ ತಾವು ಈಗ ಕೇಂದ್ರ ಸರಕಾರವನ್ನು ತೋರಿಸುವುದರಿಂದ ಯಾವ ರೈತರಿಗೂ ಅನುಕೂಲವಾಗುವುದಿಲ್ಲ. ರೈತರಿಗೆ ಇದಕ್ಕಿಂತ ಹೆಚ್ಚಿನ ನಯ ವಂಚನೆ ಬೇರೊಂದು ಇಲ್ಲ. ಇದೊಂದು ಮಧ್ಯಂತರ ಇಲ್ಲಿ ನಡೆದಿದೆ, ಪಿತೂರಿ ನಡೆದಿದೆ. ರೈತರು ಖಂಡಿತವಾಗಿ ನಿಮ್ಮನ್ನು ಕ್ಷಮಿಸುವುದಿಲ್ಲ. ನಯ ವಂಚನೆ ಮಾಡಿ ಪಿತೂರಿ ಮಾಡಿ ರೈತರಿಗೆ ದ್ರೋಹ ಮಾಡಿದ್ದೀರಿ ಅದನ್ನು ರೈತರು ಎಂದೂ ಕ್ಷಮಿಸುವುದಿಲ್ಲ. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿ ಈ ಸದನಕ್ಕೆ ಬಂದಾಗಿನಿಂದ ಆವೊತ್ತಿನಿಂದ ಇವತ್ತಿನವರೆಗೂ ಹೇಳುತ್ತಿದ್ದೇವೆ...

(ಗೊಂದಲ)

ಅಧ್ಯಕ್ಷರು: ಅದರ ತೀರ್ಮಾನವನ್ನು ಅವರು ಪ್ರಕಟಿಸಿದ್ದಾರೆ.

(ಗೊಂದಲ)

(ಈ ಹಂತದಲ್ಲಿ ಬಿಜೆಪಿ ಸದಸ್ಯರು ವೆಲ್‌ನಲ್ಲಿ ಬಂದು ಸರಕಾರದ ವಿರುದ್ಧ ಧಿಕ್ಕಾರ ಕೂಗಲಾರಂಭಿಸಿದರು)

Mr. SPEAKER: Order, order. I cannot allow.

4 ಜನ ಮಾನ್ಯ ಸದಸ್ಯರು ಇಡೀ ಸಭೆಯನ್ನೋ ಒತ್ತೆ ಇಟ್ಟುಕೊಳ್ಳುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. This is very unfair. This is against all parlimentary practices, and parlimentary conventions.

ನೀವು ರಾಷ್ಟ್ರೀಯ ಪಕ್ಷವೊಂದನ್ನು ಪ್ರತಿನಿಧಿಸುತ್ತಿದ್ದೀರಿ, ರಾಷ್ಟ್ರೀಯ ಪಕ್ಷದ ಪ್ರತಿನಿಧಿಗಳಾಗಿ ಆ ಹೊಣೆಗಾರಿಕೆಯನ್ನು ನೀವು ಅರಿತುಕೊಳ್ಳಬೇಕು.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಷೇಮ್ ಷೇಮ್ ಎಂದು ಕೂಗಲಾರಂಭಿಸಿದರು.)

(ಗೊಂದಲ)

ಅಧ್ಯಕ್ಷರು: ನಿಮಗೆ ರುಚಿಯಾಗದೇ ಇರತಕ್ಕಂತಹ ತೀರ್ಮಾನಗಳು ಬಂದರೆ ಅದನ್ನು ಹೇಗೆ ವಿರೋಧ ಮಾಡಬೇಕೆಂಬುದನ್ನು ನೀವು ಬೇರೆ ಯೋಚನೆ ಮಾಡಬೇಕು. ಈ ಸದನದ ಒಳಗಡೆ ಅಲ್ಲ.

(ಬಿ.ಜೆ.ಪಿ. ಸದಸ್ಯರು ವೆಲ್‌ನಲ್ಲಿ ನಿಂತು ಮಾತನಾಡತೊಡಗಿದರು)

(ಗೊಂದಲ)

ಅಧ್ಯಕ್ಷರು: ಈ ಸದನಲ್ಲಿ ದಿನನಿತ್ಯವೂ ಇಂತಹ ಘಟನೆಗಳು ನಡೆಯುತ್ತಿದ್ದರೆ ಈ ಸದನದ ಘನತೆ, ಗೌರವ ಏನಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು, ಮಾತೆತ್ತಿದರೆ ಧರಣಿ ಮತ್ತು ಮಾತೆತ್ತಿದರೆ ಸಭಾತ್ಯಾಗ ಮಾಡುವುದು ಸರಿಯಲ್ಲ.

(ಗೊಂದಲ)

MR. SPEAKER: I call upon the Chief Minister to reply.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಶಿವರಾಮೇಗೌಡರೆ, ದಯಾನಂದರಾವ್‌ರವರೇ ಕುಳಿತುಕೊಳ್ಳಿ. ವಾಸ್ತವಾಂಶಗಳ ಆಧಾರದ ಮೇಲೆ ಏನು ನಡೆದಿದೆ ಎನ್ನುವ ವಿಚಾರದ ವಿಮರ್ಶೆಯನ್ನು ನಾನು ಮಾಡುತ್ತಿದ್ದೆ. ಅಲ್ಲಿ ಏನು ನಡೆಯುತ್ತಿದೆ ಎನ್ನತಕ್ಕ ವಿಚಾರವನ್ನು ಹೇಳುತ್ತಿದ್ದೆ. ನಾನು ಹೇಳುವುದಕ್ಕೆ ಮೊದಲೇ ನಯವಂಚನೆ, ವಂಚನೆ ಮತ್ತೊಂದು, ನೀವು ಏತಕ್ಕೆ ಮಾತನಾಡುತ್ತೀರಿ ಎನ್ನುವುದು ಈ ದೇಶಕ್ಕೆ ಗೊತ್ತಾಗಿಲಿ ಎಂದು ಮಾಡುತ್ತೀರಾ?

(ಅಧ್ಯಕ್ಷರ ಪೀಠದ ಮುಂದಿನ ಭಾಗದಲ್ಲಿ ನಿಂತುಕೊಂಡು ಬಿಜೆಪಿ ಪಕ್ಷದ ನಾಯಕರು ಮತ್ತು ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಎಸ್. ಬಂಗಾರಪ್ಪ: ನೀವು ಮಧ್ಯಪ್ರದೇಶಕ್ಕೆ ಹೋಗಿ. ನಾನು ಹೇಳುವುದನ್ನು ಒಪ್ಪುವುದು ಬಿಡುವುದು ಅದು ಬೇರೆ ಪ್ರಶ್ನೆ. ವಾಸ್ತವಾಂಶದ ವಿಚಾರವನ್ನು ಸದನದಲ್ಲಿ ತಮ್ಮ ಮುಖೇನ ನಾನು ಪ್ರಸ್ತಾಪ ಮಾಡಿದಿದ್ದರೆ ಈ ರಾಜ್ಯದ ಜನತೆಗೆ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುವುದಿಲ್ಲ. ಮಾನ್ಯ ಸದಸ್ಯರಿಗೂ ಕೂಡ ಗೊತ್ತಾಗುವುದಿಲ್ಲ. ಬಿಜೆಪಿ ಸದಸ್ಯರು ಸೇರಿಕೊಂಡಂತೆ ಈ ಮಾತನ್ನು ಹೇಳುತ್ತಿದ್ದೇನೆ. ಇವತ್ತು ಶರತ್ತು ರಹಿತವಾಗಿ ಸಾಲ ಮನ್ನಾ ಆಗಬೇಕು ಎನ್ನುವ ಮಾತಿಗೆ ಮತ್ತೊಂದು ಅಭಿಪ್ರಾಯವಿಲ್ಲವೆನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ವಂಚನೆ ನಯವಂಚನೆಗೆ ಇಲ್ಲಿ ಆಸ್ಪದವಿಲ್ಲ. ನಮ್ಮ ನಿಮ್ಮ ಪ್ರಶ್ನೆಯಲ್ಲ. ಯಾವ ರೀತಿ ಷರತ್ತುಗಳನ್ನು ತೆಗೆಯಬೇಕು ಎನ್ನುವ ಬಗ್ಗೆ ಬೇರೆ ರಾಜ್ಯಗಳಲ್ಲೂ ಕೂಡ ಒತ್ತಡವನ್ನು ಕೇಂದ್ರಸರ್ಕಾರದ ಮೇಲೆ ತಂದಿದ್ದಾರೆ. ನಬಾರ್ಡ್‌ನವರು ಕೂಡ ನಮ್ಮ ಮೇಲೆ ಷರತ್ತುಗಳನ್ನು ಹಾಕಬಾರದು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮಧ್ಯಪ್ರದೇಶ ಮತ್ತೊಂದು ಯಾವುದಾದರೂ ರಾಜ್ಯ ಮಾಡಿದ್ದರೆ, ಪೂರ್ತಿ ಸಾಲವನ್ನು ಅವರೇ ವಹಿಸಿಕೊಂಡಿರತಕ್ಕದ್ದು ನನಗೆ ಗೊತ್ತಿಲ್ಲ. ಆ ರೀತಿ ಅವರು ಮಾಡಿದ್ದರೆ ಆ ವಿಚಾರವನ್ನು ತರಿಸಿ ನೋಡುತ್ತೇನೆ ಆ ಪ್ರಶ್ನೆ ಬೇರೆ.

(ಅಧ್ಯಕ್ಷರ ಪೀಠದ ಮುಂದಿನ ಭಾಗದಲ್ಲಿ ನಿಂತುಕೊಂಡು ಬಿಜೆಪಿ ಸದಸ್ಯರು ಮಾತನಾಡುತ್ತಿದ್ದರು)

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಶಿವರಾಮೇಗೌಡರೇ ತಾವು ಕುಳಿತುಕೊಳ್ಳಿ. ನಾನು ಒಂದು ವಿಷಯವನ್ನು ಸದನದ ಮುಖಾಂತರ...

ಶ್ರೀ ಎಲ್.ಆರ್. ಶಿವರಾಮೇಗೌಡ: ಸಭಾಧ್ಯಕ್ಷರೇ ಬಿಜೆಪಿ ಸದಸ್ಯರುಗಳನ್ನು ಸಭೆಯಿಂದ ಹೊರಗೆ ಹಾಕದೆ ಬಾಕಿ ಇನ್ನೇನೂ ಉಳಿದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಏತಕ್ಕೆ ಹೊರಗೆ ಹಾಕಬೇಕು? ನೀವು ಹೇಳಿದ್ದನ್ನು ಕೇಳಿಕೊಂಡು ಸುಮ್ಮನೆ ಕುಳಿತುಕೊಳ್ಳಬೇಕೇ?

(ಗೊಂದಲ)

ಅಧ್ಯಕ್ಷರು: ಈ ರೀತಿ ಸಭೆಯನ್ನು ನಡೆಸಬೇಕೆಂದು ನೀವು ತೀರ್ಮಾನಕ್ಕೆ ಬಂದಿದ್ದರೆ ಸಭೆಯನ್ನು ಅನಿರ್ದಿಷ್ಟಕಾಲ ಮುಂದಕ್ಕೆ ಹಾಕಿಬಿಡುತ್ತೇನೆ. ನನಗೆ ಬೇರೆ ಮಾರ್ಗ ಉಳಿದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೇ ನೀವೇ ಹೇಳಿ. ನಿಮ್ಮ ವಿರೋಧವನ್ನು ವ್ಯಕ್ತಪಡಿಸುವುದಕ್ಕೆ ವಿಧಿವಿಧಾನ ಇದೆ. ಆ ವಿಧಿವಿಧಾನದ ಚೌಕಟ್ಟಿನಲ್ಲಿ ವಿರೋಧವನ್ನು ವ್ಯಕ್ತಮಾಡುವುದಕ್ಕೆ ಯಾರಾದರೂ ಅಭ್ಯಂತರವನ್ನು ಇದುವರೆಗೆ ತಂದಿದ್ದಾರೇನು? ಆದ್ದರಿಂದ ನೀವು ಮುಖ್ಯಮಂತ್ರಿಗಳು ಭಾಷಣ ಮಾಡತಕ್ಕ ಕಾಲದಲ್ಲಿ ನೀವು ಧಿಕ್ಕಾರ, ಧಿಕ್ಕಾರ ಎಂದು ಘೋಷಣೆ ಕೂಗತಕ್ಕದ್ದು ಸರಿಯಲ್ಲ.

(ಸಭಾಧ್ಯಕ್ಷರ ಪೀಠದ ಮುಂದಿನ ಭಾಗದಲ್ಲಿ ನಿಂತುಕೊಂಡು ಬಿಜೆಪಿ ಸದಸ್ಯರು ಮಾತನಾಡುತ್ತಿದ್ದರು)

(ಗೊಂದಲ)

Mr. SPEAKER: Nothing will go on record.

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಶಿವರಾಮೇಗೌಡರೆ ತಾವು ಕುಳಿತುಕೊಳ್ಳಿ, ನಾನು ವಿಚಾರವನ್ನು ಹೇಳಬೇಕಲ್ಲ, ನಾನು ತಮ್ಮ ಅಪ್ಪಣೆ ಪಡೆದು ವಿಚಾರವನ್ನು ತಿಳಿಸುತ್ತಾ ಇದ್ದೆ.

Mr. SPEAKER: Before you proceed..

ನಾನು ಯಾರ ಹೆಸರು ಕರೆದಿದ್ದೇನೆ ಅವರು ಮಾತನಾಡಿದ್ದು ಮಾತ್ರ ರೆಕಾರ್ಡ್‌ಗೆ ಹೋಗುತ್ತದೆ. ಬಾಕಿ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಭಾರತೀಯ ಜನತಾ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪ ಮತ್ತು ಅವರ ಪಕ್ಷದ ಇತರ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರುಗಡೆ ನಿಂತುಕೊಂಡು ಮಾತನಾಡುತ್ತಿದ್ದರು.)

Mr. SPEAKER: I am afraid...

ನಾನು ಯಾವುದನ್ನು ಮಾಡಬಾರದು, ಹಾಗೆಂದು ಹೇಳಿ ತೀರ್ಮಾನ ಮಾಡಿಕೊಂಡು ಈ ಸ್ಥಾನವನ್ನು ಅಲಂಕರಿಸಿದ್ದೆನೋ ನಾನು ಅದನ್ನು ಈ ದಿವಸ ಮಾಡಬೇಕಾಗುತ್ತದೆ. ದಯವಿಟ್ಟು ಮಾನ್ಯ ಸದಸ್ಯರುಗಳು ಅವರವರ ಸ್ಥಾನಗಳಿಗೆ ಮೊದಲು ಹೋಗಬೇಕು.

ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ವಿರೋಧಪಕ್ಷದ ಎಲ್ಲಾ ನಾಯಕರುಗಳನ್ನು ನಾನು ವಿನಂತಿಸುತ್ತೇನೆ. ದಯವಿಟ್ಟು ಮಾನ್ಯ ಸದಸ್ಯರು ಅವರವರ ಸ್ಥಾನಗಳಿಗೆ ಹೋಗುವುದಕ್ಕೆ ನನ್ನ ಜೊತೆ ನೀವು ಸಹಕರಿಸಿಬೇಕು.

(ಅವರಣದಲ್ಲಿ ನಿಂತು ಶ್ರೀ ಬಿ.ಎಸ್. ಯಡಿಯೂರಪ್ಪನವರು ಮಾತನಾಡುತ್ತಲೇ ಇದ್ದರು)

ಶ್ರೀ ಎಸ್. ಬಂಗಾರಪ್ಪ: ಮಾನ್ಯ ಸಭಾಧ್ಯಕ್ಷರೇ, ನಾನು ಆ ವಿಚಾರವನ್ನು ತಮ್ಮ ಅಪ್ಪಣೆ ಪಡೆದು ಹೇಳುತ್ತಿದ್ದೆ. ಷರತ್ತುಗಳು ಇರಕೂಡದು ಎನ್ನತಕ್ಕಂಥಾದ್ದೇ ಸರ್ಕಾರದ ಅಬಿಪ್ರಾಯ. ಈ ಸ್ಕೀಮ್‌ನ್ನು ಇವಾಲ್ವ್ ಮಾಡಬೇಕಾದರೂ ಕೂಡ ನಾವು ಕೇಂದ್ರಸರ್ಕಾರಕ್ಕೆ ಒತ್ತಾಯ ತಂದಿದ್ದೇವೆ, ಅದನ್ನು ಮಾಡಿದ್ದೇವೆ. ಆದರೂ ಕೂಡ ಅವರು ನೆಪಕ್ಕೆ ಕೆಲವು ನಿಬಂಧನೆ ಇಟ್ಟು ಮಾಡಿದ್ದಾರೆ ಎನ್ನತಕ್ಕಂಥಾದ್ದು. ನಮ್ಮ ಪಕ್ಷದ ಸಭೆಯಲ್ಲಿ ಕೂಡ ಈ ವಿಚಾರದಲ್ಲಿ ಪಕ್ಷಾತೀತವಾಗಿ ಚರ್ಚೆ

ಮಾಡಬೇಕೆಂದು ನಿರ್ಧಾರ ಮಾಡಿದ್ದೇನೆ. ಇದನ್ನು ತೆಗೆದುಬೇಕು, ಇದನ್ನು ಮಾಡಿದಿದ್ದರೆ ಆಗುವುದಿಲ್ಲ ಎಂಬ ಅಭಿಪ್ರಾಯ ಇದೆ. ಇದರಲ್ಲಿ ಭಿನ್ನಾಭಿಪ್ರಾಯ ಮತ್ತೊಂದು ಇಲ್ಲ. ಇವರು ಇಲ್ಲಿ ಏನು ಹೇಳುವುದು? ಅವರು ಏನಾದರೂ ಇಟ್ಟುಕೊಳ್ಳಲಿ, ನೀವು ಆ ಷರತ್ತು ಏನು ಹಾಕಿದ್ದಾರೆ, ನಮ್ಮ ಅರ್ಧಭಾಗದ ಹಣದ್ದು ಏನಿದೆ, ಅದರ ಜವಾಬ್ದಾರಿಯನ್ನು ನೀವು ವಹಿಸಿಕೊಳ್ಳಿ ಎಂದು ವಿರೋಧಪಕ್ಷದ ನಾಯಕರು, ಶ್ರೀಮಾನ್ ಜಾಲಪ್ಪನವರು, ತಾವು ಅನಂತರ ವಾಟಾಳ್ ನಾಗರಾಜ್ ಅವರು, ಪ್ರೊ. ನಂಜುಂಡಸ್ವಾಮಿ ಇತ್ಯಾದಿಯವರು ಹೇಳಿದ್ದಾರೆ. ಇದೇ ಅಭಿಪ್ರಾಯ ಬಿಟ್ಟು ಎಲ್ಲಾ ಷರತ್ತುಗಳು ಇರಲಿ ಎಂದು ನಮ್ಮವರು ಯಾರೂ ಕೂಡ ಭಾಷಣ ಮಾಡಿಲ್ಲ, ಹಾಗೆ ಯಾರೂ ಕೂಡ ಹೇಳುವುದಿಲ್ಲ. ಏಕೆಂದರೆ ಸರ್ಕಾರದ್ದು ಒಂದು ತೀರ್ಮಾನವಾಗಿದೆ. ಇದರ ಬಗ್ಗೆ ಅನುಮಾನ ಬೇಕಾಗಿಲ್ಲ, ಇಲ್ಲಿ ಏನಾಗಿದೆ? ನೀವು ಷರತ್ತುಗಳು ಇದ್ದರೂ ಕೂಡ, ನೀವು 50 ಪರ್ಸೆಂಟ್ ಸಾಲ ವಹಿಸಿಕೊಳ್ಳಬೇಕು ಎನ್ನತಕ್ಕಂಥ ಮಾತಿಗೆ ಅರ್ಥವೇ ಇಲ್ಲ. ಏಕೆಂದರೆ ಬಹಳ ಜನರಿಗೆ ಉಪಯೋಗ ಆಗುವುದಿಲ್ಲ ಎನ್ನುವ ಅಭಿಪ್ರಾಯ ಇಟ್ಟೇ. ಈ ಮಾತನ್ನು ಆಡುತ್ತಿದ್ದೇನೆ. 50 ಪರ್ಸೆಂಟ್ ಎಂದರೆ ಈ ಸ್ಕೀಮೇ ಕಿತ್ತುಕೊಂಡು ಹೊರಟುಹೋಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಇಲ್ಲಿ ಸ್ವಲ್ಪ ಕೇಳಿ. ಹೇಳುವುದು ಬಹಳ ಸುಲಭ. ಸರ್ಕಾರ ಮಾಡಿ ನೋಡಿದರೆ ಗೊತ್ತಾಗುತ್ತದೆ. ಆದ್ದರಿಂದ ರೈತರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಈ ವಿಚಾರದಲ್ಲಿ ನಾವು ಒತ್ತಡವನ್ನು ನಾವು ತಂದಿದ್ದೇವೆ. ಆದರೂ ಕೂಡ ನಾನು ಒಂದು ಮಾತನ್ನು ಸ್ಪಷ್ಟಪಡಿಸುತ್ತೇನೆ. ಈ ಷರತ್ತಿಗೆ ಒಳಪಟ್ಟು ಬಹಳ ಜನ ರೈತರಿಗೆ ಇದರಿಂದ ಎಷ್ಟು ಜನಕ್ಕೆ ಉಪಯೋಗ ಆಗುತ್ತದೋ ಅಷ್ಟು ಜನಕ್ಕೆ ಆಗಲಿ. ಒಂದು ವೇಳೆ ಷರತ್ತುಗಳು ಇದ್ದರೂ ಕೂಡ ಉಪಯೋಗ ಆಗುವುದಿಲ್ಲ ಎಂದು ಇಟ್ಟುಕೊಳ್ಳೋಣ. ನಾನು ಸ್ಪಷ್ಟಪಡಿಸುತ್ತೇನೆ, ಕೇಂದ್ರ ಸರ್ಕಾರದವರು ನಬಾರ್ಡ್ ಮತ್ತೊಂದು ಯಾವುದೇ ಸಂಸ್ಥೆ ಇರಲಿ, ಅದರ ವರೆಗೆ, ಈ ಷರತ್ತುಗಳನ್ನು ತೆಗೆದುಹಾಕುವವರೆಗೆ ಯಾರು ಹತ್ತು ಸಾವಿರ ಒಳಗಡೆ ರೈತರು ಇದ್ದಾರೆ, ಆ ಸಾಲದ ವಸೂಲಾತಿಗೆ ನಾವು ಹೋಗುವುದಿಲ್ಲ. ಷರತ್ತುಗಳು ಇದ್ದರೂ ಕೂಡ, ತೊಂದರೆ ಬರುತ್ತೇದೆ ಎಂದರೆ ನಾವು ಸಾಲ ವಸೂಲಾತಿಗೆ ಹೋಗುವುದಿಲ್ಲ, ಕೇಂದ್ರದ ಜೊತೆ ಇದನ್ನು ವ್ಯವಹಾರ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಇದು ಒಂದು ವಿಚಾರ. ಇದರ ಜೊತೆಗೆ ಈ ಸಂದರ್ಭದಲ್ಲಿ ಮಾನ್ಯ ಪ್ರೊ. ನಂಜುಂಡಸ್ವಾಮಿಯವರು ಹೇಳಿದರು, ಮತ್ತೊಂದು ವಿಚಾರ, ಹತ್ತು ಸಾವಿರ ಒಳಗಡೆ ಇರತಕ್ಕದ್ದು, ಇದು ಸಾಲದ ಬಗ್ಗೆ ಅಲ್ಲ, ಲ್ಯಾಂಡ್ ರೆವಿನ್ಯೂ ಆಕ್ಟ್ ಬಗ್ಗೆ ಇರತಕ್ಕದ್ದು, ಈ 161, 163 ,ಸೆಕ್ಷನ್‌ಗೆ ಸಂಬಂಧಪಟ್ಟಿರತಕ್ಕದ್ದು. ನಾವು ಏತಕ್ಕೆ ಹತ್ತು ಸಾವಿರ ರೂಪಾಯಿ ಮಾಡಿದ್ದೇವೆ ಎಂದರೆ ನಾಳೆ ನಿಮಗೆ ಸ್ವಲ್ಪವಾದರೂ ಕಂಡೀಶನ್ಸ್ ಇಲ್ಲದಿದ್ದರೆ ಸುಮ್ಮನೆ ಕೊಡುವುದಿಲ್ಲ, ಕಂದಾಯ ಬಾಕಿ ಕಟ್ಟುವುದಿಲ್ಲ, ಏನು ಬೇಕಾದರೂ ಮಾಡಿಕೊಂಡು ಹೋಗಲಿ ಎನ್ನತಕ್ಕಂಥ ಜನರಿಗೆ ಮಿತಿ ಇದ್ದರೆ, ಸ್ವಲ್ಪ ಹೆದರಿಕೆಯಿಂದ ಹಣ ಕಟ್ಟುತ್ತಾರೆ ಎನ್ನತಕ್ಕಂಥ ಆಸೆಯಿಂದ ಆ ರೀತಿ ಒಂದು ನಿಬಂಧನೆಯನ್ನು ಅದರಲ್ಲಿ ಇಟ್ಟಿದ್ದೇವೆ. ನೋಡೋಣ, ಈಗಾಗಲೇ ಹತ್ತು ಸಾವಿರ ಒಳಗಡೆ ಬಾಕಿ ಇರುವವರಿಗೆ ಯಾರಿಗೂ ತೊಂದರೆಯಾಗುವುದಿಲ್ಲ, ಅದಕ್ಕೂ ಏನಾದರೂ ತೊಂದರೆ ಬಂದಾಗ ಮುಂದೆ ಬೇಕಾದರೆ ಅದನ್ನು ರಿವೈಸ್ ಮಾಡುವುದಕ್ಕೆ ಕೂಡ ವಿಚಾರ ಮಾಡೋಣ. ಅನಂತರ ಲಿಫ್ಟ ಇರಿಗೇಶನ್ ಸ್ಕೀಮ್ ವಿಚಾರಕ್ಕೆ ಶ್ರೀ ಜಕನೂರು ಅವರು ಹೇಳಿದ್ದಾರೆ. ಬರೀ ಸಹಕಾರ ಕ್ಷೇತ್ರದಲ್ಲಿ ಲಿಫ್ಟ್ ಇರಿಗೇಷನ್ ಸ್ಕೀಮ್ ಅಲ್ಲ. ರಿಜಿಸ್ಟ್ರೇಶನ್ ಆಕ್ಟ್ ಪ್ರಕಾರವಾಗಿ ನಾಲ್ಕು ಜನ ಸೇರಿ

ಮಾಡಿಕೊಂಡಿರುತ್ತಾರೆ. ಅದಕ್ಕೂ ಕೂಡ ಕೊಡತಕ್ಕದ್ದು, ನಾನು ಹೇಳುತ್ತೇನೆ, ಅದಕ್ಕೂ ಕೂಡ ಅನ್ವಯ ಮಾಡೋಣ, ಏಕೆಂದರೆ ಬರಗಾಲ ಬಹಳ ಕಡೆಗೆ ಇದೆ ಎನ್ನತಕ್ಕಂಥ ವಿಚಾರ ಗೊತ್ತಿದೆ. ಅದೇನು 2-6 ಕೋಟಿಯಷ್ಟು ಹಣದ ಕೊರತೆ ಇದೆ. ಅದು ಬಂದರೂ ಕೂಡ ಸರ್ಕಾರ ವಹಿಸಿಕೊಳ್ಳುತ್ತದೆ, ಆ ಹಣವನ್ನು ನಾವು ತುಂಬುತ್ತೇವೆ.

2.10 ಪಿ.ಎಂ.

ನಾನು ಮಾತನ್ನು ಸ್ಪಷ್ಟಪಡಿಸುತ್ತೇನೆ. ಮತ್ತೊಂದು ಪ್ರೊಫೆಸರ್ ನಂಜುಂಡಸ್ವಾಮಿಯವರು ಹೇಳಿರುವ ಬಿಜಾಪುರ ಜಿಲ್ಲೆ ಅಥವಾ ಮತ್ತೊಂದು ಕಡೆಯಲ್ಲಿ ಕೆ.ಇ.ಬಿ. ಸಂಬಂಧಪಟ್ಟಂತೆ ಬಾಕಿ ಇರತಕ್ಕಂಥ, ಅದರ ಮೇಲೆ ಪೀನಲ್ ಇಂಟ್ರೆಸ್ಟ್ ಹಾಕಿದ್ದಾರೆ. ಇದು ಜಾಸ್ತಿಯಾಗುತ್ತದೆ ಎನ್ನತಕ್ಕಂತದ್ದು...

ಶ್ರೀ ಸಿ. ಬೈರೇಗೌಡ: ಪೀನಲ್ ಇಂಟರೆಸ್ಟ್ ಇಲ್ಲವೆಂದು ತಮ್ಮ ಉತ್ತರದಲ್ಲಿ ಹೇಳುತ್ತಿದ್ದೀರಿ.

ಶ್ರೀ ಎಸ್. ಬಂಗಾರಪ್ಪ: It is not up todate. ನೀವು ಹೇಳಿದ್ದು, ಇಲ್ಲವೆಂದು ಹೇಳಿದರೆ, ಬಿಜಾಪುರ ಜಿಲ್ಲೆಯಲ್ಲಿ ಇದೆಯೆಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನನಗೆ ಗೊತ್ತಿದೆ. ಅಲ್ಲಿಯೂ ಕೂಡ ಇದೆಯೆಂದು ಹೇಳುತ್ತಿದ್ದೀರಿ. ನಾನು ಅದನ್ನು ವಿಚಾರ ಮಾಡಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರ ಹಾಗೂ ಈ ಸದನದ ಗಮನಕ್ಕೆ ತಮ್ಮ ಮೂಲಕ ತರುವಂಥಾದ್ದು, ಎಲ್ಲಿ ವ್ಯತ್ಯಾಸವಾಗಿದೆ, ಎಷ್ಟು ಆಗುತ್ತದೆ, ಏನಾಗುತ್ತದೆ ಎನ್ನುವುದನ್ನು ವಿಚಾರ ಮಾಡೋಣ. ಕೆಲವು ಹೆವಿ ಆಗಿದೆ ಎನ್ನತಕ್ಕಂಥ ಅಭಿಪ್ರಾಯ ಬಂದಿದೆ. ಕಾಲದ ಅಭಾವದಿಂದ ಎಲ್ಲಾ ವಿವರಗಳನ್ನೂ ತರಿಸುವುದಕ್ಕೆ ಸಾಧ್ಯವಾಗಲಿಲ್ಲ, ರೈತರಿಗೆ ಅನ್ಯಾಯವಾಗಿದ್ದರೆ ಇದರ ಬಗ್ಗೆ ವಿಚಾರ ಮಾಡೋಣ. ರೈತರ ಪರವಾಗಿ ಈ ರೀತಿಯಾಗಿ ತೀರ್ಮಾನಗಳನ್ನು ಮಾಡಿದ್ದೇವೆ. ಮುಂದೆ ಕೂಡ ಮಾಡುವುದಕ್ಕೆ ನಾವು ಸಿದ್ಧರಾಗಿರುತ್ತೇವೆ. ಎಲ್ಲವನ್ನೂ ನಾವು ನೋಡಿಕೊಂಡೇ ಮುಂದೆ ಹೋಗುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇನೆ. ಇದಲ್ಲದೆ ವಿರೋಧಪಕ್ಷದ ನಾಯಕರು ಮತ್ತೊಂದು ವಿಚಾರ ತಿಳಿಸಿದ್ದಾರೆ. ಸ್ಥಾಯಿ ಸಮಿತಿ ಮಾಡತಕ್ಕಂಥ ವಿಚಾರದಲ್ಲಿ ನಾವು ಯಾರನ್ನೂ ಬಿಡಬೇಕೆಂದು ಹೋಗಿಲ್ಲ, ವಿರೋಧಪಕ್ಷದ ನಾಯಕರು, ಆ ಸದನದಲ್ಲಿ, ಈ ಸದನದಲ್ಲಿ ಅವರು ಯಾರೇ ಇರಬಹುದು. ಅವರು ಯಾವುದೇ ಪಕ್ಷದಲ್ಲಿ ಇರಬಹುದು, ಅವರು ಈ ಸದನದ ಗೌರವಾನ್ವಿತ ಸದಸ್ಯರಾಗಿ ಈ ಸ್ಥಾಯಿ ಸಮಿತಿಯ ಸದಸ್ಯರಾಗಿರುತ್ತಾರೆ. ಪಕ್ಷ ಪಂಗಡಕ್ಕೋಸ್ಕರ ನಾವು ಕಮಿಟಿ ಮಾಡುವುದಕ್ಕಾಗುವುದಿಲ್ಲ, ಆ ದೃಷ್ಟಿಯಿಂದ ಹೇಳಿದೆ. ಇದಲ್ಲದೆ ಇದರಲ್ಲಿ ತಜ್ಞರನ್ನೂ ಹಾಕಿದ್ದೇವೆ. ಬರೀ ರಾಜಕಾರಣಗಳ ಸಮಿತಿ ವಿಚಾರ ಅಲ್ಲ, ಈ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಕರ್ನಾಟಕ ರಾಜ್ಯದ ರೈತರು ಯಾರಿದ್ದಾರೆ, ಆ ರೈತರ ಪರವಾಗಿ ಈ ಸರ್ಕಾರ ಇದೆ, ತಮ್ಮ ಅಭಿಪ್ರಾಯಕ್ಕಾಗಿ ನಾವು ಇದ್ದೇವೆ. ಈ ರಾಜ್ಯದ ರೈತರು, ಯಾರಿಗಾದರೂ ಗುತ್ತಿಗೆ ಎಂದು ತಿಳಿದುಕೊಂಡಿದ್ದರೆ, ಇದು ಗುತ್ತಿಗೆ ತರಹ ನಡೆಯುವುದಿಲ್ಲ ಎನ್ನತಕ್ಕಂಥ ಮಾತನ್ನು ಸ್ಪಷ್ಟಪಡಿಸುತ್ತೇನೆ. ಈಗಾಗಲೇ ಗೊತ್ತಿದೆ, ಮೊದಲು ನಿಮಗೆ ಯಾರು ಗುತ್ತಿಗೆ ಆಗಿದ್ದರು, ಈಗ ನೀವು ಅವರನ್ನು ಮುಗಿಸಿ, ಹಳ್ಳಿಗಳ ಕಡೆಗೆ ಏಕೆ ಹೋಗಿದ್ದಾರೆಂದು ಗೊತ್ತಿದೆ. ಮುಂದೆ ಕರ್ನಾಟಕ ರಾಜ್ಯದಲ್ಲಿ ಇದರ ಬಗ್ಗೆ ರೈತರು ತೀರ್ಮಾನ ಮಾಡುತ್ತಾರೆ. ತಮ್ಮ ಮುಖಾಂತರ ಒಂದು ಮಾತನ್ನು ಹೇಳುತ್ತೇನೆ. ನಾನು ಯಾವುದೇ ರಾಜಕೀಯಕ್ಕೋಸ್ಕರ ಈ ರೀತಿ ಮಾಡಿಲ್ಲ ಅವರು ಇಷ್ಟೊಂದು ಮಾತನಾಡುತ್ತಿದ್ದಾರೆ, ಇವತ್ತು ರೈತರ ಮೇಲಿದ್ದ ಕೇಸ್ ವಿತ್‌ಡ್ರಾ ಆದವು, ಮತ್ತೊಂದು ಆದವು ಇಷ್ಟೊಂದು ಉದ್ದುದ್ದ ಪ್ರಕಟಣೆ ಮಾಡಿದ್ದೇವೆ. ಇಷ್ಟು ಮಾಡಿದರೂ ಅವರ

ಬಾಯಿಂದ ಒಂದು ಒಳ್ಳೆಯ ಮಾತು ಬಂದಿಲ್ಲ. ಅವರು ರೈತರ ಪರ ಎಂದು ಹೇಳುತ್ತಾರೆ, ಆ ರೇತಿ ಹೇಳುವುದಕ್ಕೆ ನಿಮಗೆ ಯಾವಹಕ್ಕಿದೆ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ: ಮಾನ್ಯ ಅಧ್ಯಕ್ಷರೇ. ವಿರೋಧಪಕ್ಷದ ನಾಯಕರಾಗಿ ಆ ಸಮಿತಿಯಲ್ಲಿ ಕೆಲಸ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡು ನಾನು ಇದನ್ನು ಪ್ರಸ್ತಾಪ ಮಾಡಲಿಲ್ಲ. ನಾನು ಕೇಳಿದ್ದುದು ವಿರೋಧಪಕ್ಷಗಳನ್ನು ಹೊರತುಪಡಿಸಿ, ಏಕೆ ಮಾಡಿದಿರಿ ಎಂದು.

(ಗೊಂದಲ)

(ಶ್ರೀ ವಾಟಾಳ್ ನಾಗರಾಜ್‌ರವರು ಪ್ರತಿಭಟನೆ ವ್ಯಕ್ತಮಾಡಿ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು: ಈ ಸದನದ ಬಹು ಸದಸ್ಯರ ಇಚ್ಛೆ ಏನಿತ್ತು ಎಂದರೆ, ರೈತರ ಜ್ವಲಂತ ಸಮಸ್ಯೆಯನ್ನು ಸದನ ಚರ್ಚೆ ಮಾಡಬೇಕು ಮತ್ತು ಸರ್ಕಾರದ ವತಿಯಿಂದ ಕಂಪ್ರೆಸ್ಸಿವ್ ಆಗಿ ಸಮಗ್ರವಾದ ಉತ್ತರ ಬರಬೇಕು ಉತ್ತರದ ಜೊತೆಗೆ ತೆಗೆದುಕೊಂಡಿರತಕ್ಕ ನಿರ್ಣಯಗಳು ಪ್ರಕಟವಾಗಬೇಕೆಂದು ಹೇಳಿ ಎಲ್ಲಾ ಕಡೆಯಿಂದಲೂ ಸದಿಚ್ಛೆಯನ್ನು ವ್ಯಕ್ತಪಡಿಸಿದ್ದಿರಿ, ಆ ಸದಿಚ್ಛೆ ನೆರವೇರಿದೆ ಎನ್ನುವ ಸಮಾಧಾನದಿಂದ ಈ ಸದನವನ್ನು ಮುಂದೂಡಿ ಮತ್ತೆ ಸದನ ಮೂರುಕಾಲು ಗಂಟೆಗೆ ಸೇರಲಾಗುವುದು.

ಸದನವು 2-15ಕ್ಕೆ ಮುಕ್ತಾಯವಾಗಿ, ಮತ್ತೆ 3-15ಕ್ಕೆ ಸೇರಲು ನಿಶ್ಚಯಿಸಿತು.

(ಸಭೆಯು 3-25 ಕ್ಕೆ ಪ್ರಾರಂಭವಾಯಿತು ಸಭೆಯು ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸಿದ್ದರು.)

ಶ್ರೀ ವಾಟಾಳ್ ನಾಗರಾಜ್: ಒಳಗಡೆ ನಿಂತಿರುವವರನ್ನು ಈ ಕಡೆ ಕರೆದುಕೊಳ್ಳುವುದಕ್ಕೆ ತಮ್ಮ ಸಹಕಾರ ಬೇಕು.

ಶ್ರೀ ಎಂ.ಎಸ್. ಪಾಟೀಲ್: ಒಳ್ಳೆಯ ಗಟ್ಟಿ ಮುಟ್ಟಾಗಿ ಬಂದಿದ್ದಾರೆ. ತಮ್ಮ ಪರವಾಗಿ ಮಾನ್ಯ ಯಡಿಯೂರಪ್ಪನವರನ್ನು ನಾನು ಕೇಳಿಕೊಳ್ಳುತ್ತೇನೆ ಕೊನೆಯ ದಿವಸ ಇವತ್ತು ಎಲ್ಲರೂ ಸಂತೋಷದಿಂದ ಹೋಗೋಣ. ತಮ್ಮ ಸ್ಥಾನಕ್ಕೆ ತಾವು ಹೋಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ನಾನು ಒಂದು ವಿಚಾರವನ್ನು ಸರಕಾರದ ಗಮಕ್ಕೆ ತರಬೇಕೆಂದಿದ್ದೇನೆ.....

Ruling by the chair

ಅಧ್ಯಕ್ಷರು: ಒಂದು ರೂಲಿಂಗ್ ಇದೆ ಅದನ್ನು ನೀಡುತ್ತೇನೆ.

ಮಾನ್ಯ ಶ್ರೀ ನಜೀರ್ ಅಹಮದ್ ಅವರು ತಮ್ಮನ್ನು ಕುರಿತು "ಹೊಟ್ಟೆಪಾಡಿಗಾಗಿ ಕನ್ನಡದ ಬಗ್ಗೆ ಪ್ರಚಾರ ಮಾಡುತ್ತಿದ್ದೀರಿ" ಎಂದು ಸದನದಲ್ಲಿ ಹೇಳಿದ್ದರಿಂದ ನನ್ನ ಹಕ್ಕಿಗೆ ಚ್ಯುತಿಯಾಗಿದೆ ಎಂದು ಶ್ರೀ ವಾಟಾಳ್ ನಾಗರಾಜ್ ಅವರು ಆರೋಪಿಸಿ, 190ನೇ ನಿಯಮಾನುಸಾರ ಹಕ್ಕುಚ್ಯುತಿ ಸೂಚನೆ ನೀಡಿ, ಈ ವಿಚಾರವನ್ನು ಹಕ್ಕುಭಾಧ್ಯತಾ ಸಮಿತಿಗೆ ಒಪ್ಪಿಸಬೇಕೆಂದು ಕೋರಿದ್ದಾರೆ.

ಜುಲೈ 16, 1990ರಂದು ಮಾನ್ಯ ಮುಖ್ಯಮಂತ್ರಿಯವರು ಅನುದಾನಗಳ ಬೇಡಿಕೆಗಳ ಚರ್ಚೆಗೆ ಉತ್ತರವಾಗಿ ಆಂಗ್ಲಭಾಷಾ ಶಾಲೆಗಳಿಗೆ ಮಾನ್ಯತೆ ನೀಡುವ ಸಂಬಂಧ ಸರ್ಕಾರದ ನೀತಿಯನ್ನು ಸಭೆಗೆ ನಿರೂಪಿಸುತ್ತಿದ್ದಾಗ ಮಾನ್ಯ ವಾಟಾಳ್ ನಾಗರಾಜ್ ಅವರು ಎತ್ತಿದ ಆಕ್ಷೇಪಣೆಗೆ ವಿರೋಧಪಕ್ಷಗಳು ಬೆಂಬಲಿಸಿದವು. ಮಾನ್ಯ ಮುಖ್ಯಮಂತ್ರಿಯವರ ಹೇಳಿಕೆಗೆ ಪ್ರತಿಭಟನೆ ವ್ಯಕ್ತಪಡಿಸುತ್ತಾ ವಿರೋಧಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳು